ಜನಪದ ವಿಚಾರ

ಬೆಲೆ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೧೦ ಅಕ್ಟೋಬರ್- ೨೦೦೯ ಸಂಚಿಕೆ-೩



ಸಬಕೋ ಸನ್ಮತಿ ದೇ ಭಗವಾನ್

ಜನಪದ ವಿಚಾರದಲ್ಲಿ

ಅಕ್ಟೋಬರ್-೨೦೦೯

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಅಕ್ಟೋಬರ್ - ೨೦೦೯
ಸಂಪುಟ - ೧೦
ಸಂಚಿಕೆ - ೩

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧೪೩೧
ಜಿಲ್ಲಾ ಮಂಡ್ಯ

✆08236 316344

e-mail : janapada@yahoo.com
web: janapada.net

ಗಾಂಧೀಜಿಗೆ

ಎನಿತು ಶತಮಾನಗಳ
ನಿಶ್ಚಲ ತಪೋನಿಷ್ಠೆ
ಫಲಿಸಿತೋ,
ಭಾರತೀಯ ಸೌಭಾಗ್ಯ ಬೆಳಗಿತೊ !
ಸತ್ಯನಿರ್ಮಲ
ಶಾಂತ ಮೂರ್ತಿ ಗಾಂಧೀಜಿ !
ನಿಮ್ಮ ಪುಣ್ಯ ಜನ್ಮೋದಯದ
ಮಂಗಲೋತ್ಸವದಂದು?
ಆಸ್ತೇಯ ಶುದ್ಧಿ ದಯೆ
ಸ್ಥಿರಸತ್ಯವ್ರತಗಳಲಿ
ಸಿದ್ಧಿಗೊಂಡಿಹ
ನಿಮ್ಮ ಜೀವ ಪಾವನವಾಯ್ತು !
ಹೆತ್ತೊಡಲಿಗಮೃತಸಿಂಚನವಾಯ್ತು !
ನಿಮ್ಮಿಂದ ರಾಷ್ಟ್ರ ಸರ್ವಾಂಗದಭ್ಯುದಯ
ಸಾಧನೆಯಾಯ್ತು.

ದರ್ಪಮದಮೋಹಿತರು
ಸ್ವಾರ್ಥಸುಖ ಸಾಧಕರು
ಮತಿಗೆಟ್ಟ ಮಾನವರು
ಜಗವಪೀಡಿಸುತಿರಲು
ಪಶ್ಚಿಮದ ಭೂದೇವಿ ಕೆರಳಿದಳೆ?
ಪ್ರಳಯ ಪಂಥವ ತೊಟ್ಟು
ಲೋಕನಾಶಕೆ ಮನವ ಮಾಡಿದಳೆ?
ಜೀವಿಗಳು ಕೂಗುತಿವೆ:
ಕಾಪಾಡಿ ಕಾಪಾಡಿ
ರೆಂದನ್ಯಗತಿಯಿಲ್ಲದಿಂದು ನಿಮ್ಮನೆ ನೋಡಿ !

– ಕೈಯಾರ ಕಿಞ್ಞಣ್ಣ ರೈ

ವಿಚಾರ ದೀಪ್ತಿ

ವಿಶ್ವದಾದ್ಯಂತ ಆಹಾರ ಧಾನ್ಯಗಳ ಬೆಲೆಗಳು ನಿರಂತರವಾಗಿ ಏರುತ್ತಲೇ ಇವೆ. ಆಹಾರಕ್ಕಾಗಿಯೇ ೩೩ಕ್ಕೂ ಹೆಚ್ಚು ದೇಶಗಳಲ್ಲಿ ಗಲಭೆ-ಹಿಂಸಾಚಾರಗಳೂ ನಡೆಯುತ್ತಿವೆ.

ಭಾರತದಲ್ಲಿಯೂ ಅವಶ್ಯಕ ಸರಕುಗಳ ಬೆಲೆಗಳು ಗಗನಕ್ಕೆ ಏರುತ್ತಲೇ ಸಾಗಿವೆ. ಜನಸಂಖ್ಯೆ ಹೆಚ್ಚಳವೂ ಇದಕ್ಕೆ ಕಾರಣ ಎನ್ನುವುದೂ ನಿಜವಾದರೂ, ಸರಕಗಳು ದುಪ್ಪಟ್ಟು ಪ್ರಮಾಣದಲ್ಲಿ ದುಬಾರಿ ಆಗುತ್ತಿರುವುದಕ್ಕೆ ಜನಸಂಖ್ಯೆ ಹೆಚ್ಚಳವನ್ನೇ ದೂಷಿಸುವಂತಿಲ್ಲ. ಕಳೆದ ಒಂದು ವರ್ಷದಲ್ಲಿ ಬೆಲೆಗಳು ಎರಡು ಪಟ್ಟು ಹೆಚ್ಚಾಗಿವೆ. ಜನಸಂಖ್ಯೆಯೂ ಇಷ್ಟೇ ಪ್ರಮಾಣದಲ್ಲೇನೂ ಏರಿಕೆಯಾಗಿಲ್ಲ.

ಮೊದಲ ಪಂಚವಾರ್ಷಿಕ ಯೋಜನೆಯಲ್ಲಿ ಅರ್ಥ ವ್ಯವಸ್ಥೆಗೆ ಸಾವಿರಾರು ಕೋಟಿ ರೂಪಾಯಿಗಳನ್ನು ಹರಿಸಿದರೂ, ಸುಧಾರಣೆ ಕಾಣದೇ ಹೋದಾಗ, ಆಗಿನ ಪ್ರಧಾನಿ ಜವಾಹರಲಾಲ್ ನೆಹರೂ ಅವರು ಹಣ ಎಲ್ಲಿ ಹೋಯಿತು ಎನ್ನುವುದನ್ನು ತಿಳಿದುಕೊಳ್ಳಲು ಆರ್ಥಿಕ ತಜ್ಞರ ಮೊರೆ ಹೋಗಿದ್ದರು. ಯೋಜನೆಗಳಿಗೆ ನಿಗದಿಯಾಗಿದ್ದ ಹಣದ ಬಹುಪಾಲು ಶ್ರೀಮಂತರ ಜೇಬು ಭರ್ತಿ ಮಾಡಿರುವುದನ್ನು ವರದಿ ದೃಢಪಡಿಸಿತ್ತು.

ವರದಿ ಕಂಡ ನೆಹರೂ ಅವರಿಗೆ ಆಶ್ಚರ್ಯವಾಗಲಿಲ್ಲ. ಸಮಾಜದ ಉದ್ಧಾರಕ್ಕೆ ಉದಾರ ದಾನ ನೀಡಬೇಕೆಂದು ಗಾಂಧೀಜಿಯವರು ಕೈಗಾರಿಕೋದ್ಯಮಿಗಳು ಮತ್ತು ಉದ್ಯಮಿಗಳಿಗೆ ಮಾಡಿಕೊಂಡ ಮನವಿ ಕೈಗೂಡದಿರುವುದು ಕಂಡು ಅವರಿಗೆ ಆಘಾತವಾಗಿತ್ತು.

ಗಾಂಧೀಜಿ ಪ್ರತಿಪಾದಿಸಿದ್ದ ಗ್ರಾಮೀಣ ಆರ್ಥಿಕತೆ ಮತ್ತು ಸ್ವಾವಲಂಬನೆ ತತ್ವ ಪಾಲನೆ ಮಾಡದಿರುವುದೇ ವಾಸ್ತವ ಸಂಗತಿಯಾಗಿತ್ತು. ಇಂತಹ ಪರಿಸ್ಥಿತಿಗೆ ಪ್ರಧಾನಿಯೇ ಕಾರಣವಲ್ಲ. ಸರ್ಕಾರ ನಡೆಸುತ್ತಿದ್ದವರೆಲ್ಲ ಅದಕ್ಕೆ ಹೊಣೆಯಾಗಿದ್ದರು.

ದೇಶವು ಆರ್ಥಿಕವಾಗಿ ಸದೃಢವಾಗುತ್ತಿದ್ದರೂ, ಹಸಿವಿನ ಪ್ರಮಾಣ ಹೆಚ್ಚುತ್ತಲೇ ಸಾಗಿರುವುದಕ್ಕೆ 'ತ್ರಿಮೂರ್ತಿ'ಗಳ ಧೋರಣೆಯೇ ಮುಖ್ಯ ಕಾರಣ. ಪ್ರಧಾನಿ ಮನಮೋಹನ್ ಸಿಂಗ್, ಹಿಂದಿನ ಹಣಕಾಸು ಸಚಿವ ಪಿ.ಚಿದಂಬರಂ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷ ಮೊಂಟೆಕ್ ಸಿಂಗ್ ಅಹ್ಲುವಾಲಿಯಾ. ಇವರು ಜಾಗತೀಕರಣವನ್ನು ಬಲವಾಗಿ ಪ್ರತಿಪಾದಿಸಿ ಅದನ್ನು ಜಾರಿಗೆ ತರುತ್ತಿದ್ದಾರೆ.

ಆರ್ಥಿಕ ವಿಷಯಗಳಲ್ಲಿ ಅವರು ನಿಪುಣರು ಮತ್ತು ಸಮರ್ಥರಾಗಿದ್ದರೂ, ಅಭಿವೃದ್ಧಿ ಚಿತ್ರಣದ ಸಾಕ್ಷ್ಯ ತೋರಿಸುವಲ್ಲಿ ಸೋತಿದ್ದಾರೆ. ಒಟ್ಟು ರಾಷ್ಟ್ರೀಯ ಉತ್ಪನ್ನವು ಮೂರು ಪಟ್ಟುಗಳಷ್ಟು ಹೆಚ್ಚಾಗಿರುವ ಸಂಪತ್ತು ಎಲ್ಲಿ ಕಾಣೆಯಾಗುತ್ತಿದೆ ಎನ್ನುವುದನ್ನು ತಿಳಿದುಕೊಳ್ಳಲು ಪ್ರಧಾನಿ ಉತ್ಸುಕರಾಗದಿರುವುದೂ ನನ್ನನ್ನು ಚಕಿತಗೊಳಿಸಿದೆ.

ಸಿರಿವಂತರು ಮತ್ತು ಮಧ್ಯಮ ವರ್ಗದವರು ಜಾಗತೀಕರಣದ ಫಲ ಉಣ್ಣುತ್ತಿರುವುದು ನಿಜ. ಅದೊಂದು ಬರೀ ಭಾಗಶಃ ಉತ್ತರವಷ್ಟೆ. ಒಟ್ಟಾರೆ ವಾಸ್ತವ ತಿಳಿದುಕೊಳ್ಳಲು ದೇಶ ಬಯಸಿದೆ. ಅದಕ್ಕೆ ಉತ್ತರ ಸಿಗುವುದೇ ?

– ಕುಲದೀಪ್ ನಯ್ಯರ್

* * *

ಸಬಕೋ ಸನ್ಮತಿ ದೇ ಭಗವಾನ್

- ಸುರೇಂದ್ರ ಕೌಲಗಿ

ಹಿಂದಿನ ಹಗೆಯೀಗ ಅಂಗಾರವಾಯ್ತು
ಮುಂದಿರುವ ಗೆಳೆತನ ಸಿಂಗಾರವಾಯ್ತು

- ಅಂಬಿಕಾತನಯದತ್ತ

ಗಾಂಧೀ ಜಯಂತಿ ಬಂದಿದೆ. ಇದು ೧೪೦ನೇ ಜಯಂತಿ. ಇದೇ ರೀತಿ ಪ್ರತಿ ವರ್ಷ ಗಾಂಧೀ ಜಯಂತಿ ಬರುತ್ತಲೇ ಇರುತ್ತದೆ, ಹೋಗುತ್ತಲೇ ಇರುತ್ತದೆ. ಜಯಂತಿ ಬಂದರೆ ಅದಕ್ಕೆ ಬೆಲೆ ಬರುವುದು ಗಾಂಧೀಯವರ ವಿಚಾರಗಳನ್ನು ಅಂಗೀಕರಿಸಿ ಅದರಂತೆ ಜನರು ತಮ್ಮ ಜೀವನವನ್ನು ರೂಪಿಸಿಕೊಂಡರೆ ಮಾತ್ರ. ಅವರ ವಿಚಾರಗಳನ್ನು ಮರೆತು ಅದಕ್ಕೆ ವಿರುದ್ಧವಾಗಿ ನಡೆದುಕೊಂಡರೆ ಜಯಂತಿಯ ಆಚರಣೆ ಶುಷ್ಕ. ಅಲ್ಲದೆ, ಮುಂದೆ ಕೆಲವು ವರ್ಷಗಳಲ್ಲಿ ಗಾಂಧೀ ಜಯಂತಿಯೆಂಬುದು ಜನರ ಮಾನಸದಿಂದ ಅಳಿಸಿ ಹೋಗಲೂಬಹುದು. ಈ ಮಾತುಗಳು ಕೇವಲ ಗಾಂಧೀ ಜಯಂತಿಗೆ ಮಾತ್ರ ಅನ್ವಯಿಸುವಂಥದಲ್ಲ, ಜಗತ್ತಿನ ಇತರ ಎಲ್ಲ ಮಹಾತ್ಮರ ಜಯಂತಿಗೂ ಅನ್ವಯಿಸುತ್ತದೆ. ಈಗಾಗಲೇ ಅಂಬೇಡ್ಕರ್ ಜಯಂತಿ, ಮಹಾವೀರ ಜಯಂತಿ, ಬುದ್ಧ ಜಯಂತಿ, ವ್ಯಾಸ ಪೂರ್ಣಿಮೆ, ಕೃಷ್ಣ ಜಯಂತಿ, ರಾಮ ನವಮಿ, ಕ್ರಿಸ್‌ಮಸ್, ರಂಜಾನ್ ಮುಂತಾದವುಗಳೆಲ್ಲ ಅಯಾ ಮಹಾತ್ಮರ ಅನುಯಾಯಿಗಳ ವಿರೋಧಾಭಾಸದ ಜೀವನ ಪದ್ಧತಿಯಿಂದ ಕಳಾಹೀನವಾಗಿವೆ. ಕೇವಲ ಪಂಚಾಂಗದಲ್ಲಿ ದಾಖಲಾಗಿರುವ ನಕ್ಷತ್ರಗಳ ಹೆಸರುಗಳಂತೆ ಈ ಎಲ್ಲ ಮಹಾತ್ಮರ ಹೆಸರುಗಳು ಕ್ಯಾಲೆಂಡರ್‌ಗಳಲ್ಲಿ ಮಾತ್ರ ನಮೂದಿತವಾಗುತ್ತಿವೆ. ಅನುಯಾಯಿಗಳ ನಿಜ ಜೀವನಕ್ಕೂ ಇವರ ಬೋಧನೆಗೂ ಭೂಮಿ-ಆಕಾಶದಷ್ಟು ಅಂತರವುಂಟಾಗುತ್ತಿದೆ. ವರ್ಷಗಳು ಉರುಳಿದಂತೆ ಬರುವ ಈ ಜಯಂತಿಗಳು ಈ ಅಂತರವನ್ನು ಹಾಗೆಯೇ ಕಾಯ್ದುಕೊಂಡು ಬರುವಲ್ಲಿ ಯಶಸ್ಸುಕಂಡಿವೆಯೇ ಹೊರತು ಆ ಅಂತರವನ್ನು ಕಡಿಮೆ ಮಾಡುವುದರಲ್ಲಿಯಲ್ಲ. ಆಶ್ಚರ್ಯದ ಸಂಗತಿಯೇನೆಂದರೆ ಈ ಬಗ್ಗೆ ಯಾವ ಮಹಾತ್ಮರ ಅನುಯಾಯಿಗಳಿಗೂ ಮನಸ್ಸಿಗೆ ನೋವುಂಟಾಗುವುದಾಗಲೀ, ದುಃಖವುಂಟಾಗುವುದಾಗಲೀ, ಪಶ್ಚಾತ್ತಾಪವುಂಟಾಗುವುದಾಗಲೀ ಆಗುತ್ತಿಲ್ಲ. ಬದಲಿಗೆ ಅವರ ಹೆಸರಿನಲ್ಲಿಯ ಜಯಂತಿಯಂದು ತಮ್ಮ ದಿನ ನಿತ್ಯದ ಕರ್ತವ್ಯಗಳನ್ನು ಕಟ್ಟಿಟ್ಟು ಸ್ವೇಚ್ಛೆಯಾಗಿ ಅಲೆದಾಡುವ, ಕಾಲ ಕಳೆಯುವ ದಿನಗಳನ್ನಾಗಿ ಪರಿವರ್ತಿಸಿಕೊಳ್ಳಲಾಗುತ್ತಿದೆ. ಆ ಮಹಾತ್ಮರ ಅನುಯಾಯಿಗಳಾದ ತಾವು ಅವರ ವಿಚಾರಗಳನ್ನು ತಮ್ಮ ಜೀವನದಲ್ಲಿ ಎಷ್ಟರ ಮಟ್ಟಿಗೆ ಅಳವಡಿಸಿಕೊಂಡಿದ್ದೇವೆ ಎಂಬ ಬಗ್ಗೆ ಆತ್ಮವಿಮರ್ಶೆ ಮಾಡಿಕೊಳ್ಳುವ ಬದಲು ತಮ್ಮ ಗುರುವಿನ ಜಯಂತಿಯಂದು ಸರ್ಕಾರ ರಜೆ ಘೋಷಣೆ ಮಾಡಿದೆಯೇ ಇಲ್ಲವೇ ಎಂಬ ಬಗ್ಗೆ ಚಿಂತನೆ ನಡೆಯುತ್ತದೆ. ಒಂದು ವೇಳೆ ಸರ್ಕಾರ ರಜೆ ಘೋಷಣೆ ಮಾಡದೇ ಹೋಗಿದ್ದರೆ ತಮ್ಮ ರಾಜಕೀಯ ವೋಟ್ ಬ್ಯಾಂಕಿನ ಬಲವನ್ನು ಪ್ರದರ್ಶಿಸಿ ತಮ್ಮ ಗುರುವಿನ ಜಯಂತಿಯಂದು ಸರ್ಕಾರ ರಜೆ ಘೋಷಿಸುವಂತೆ ಮಾಡುವುದರಲ್ಲಿ ತಮ್ಮ ಗುರು ಭಕ್ತಿಯ ಸಾಫಲ್ಯವನ್ನು ಕಾಣುತ್ತಾರೆ.

ಮುಂದೆ ಆ ರಜೆಯ ದಿನವನ್ನು ಆಮೋದ ಪ್ರಮೋದಗಳಲ್ಲಿ ಕಳೆದು ಗುರುಬೋಧಿಸಿದ ತತ್ವ, ಸಿದ್ಧಾಂತ, ವಿಚಾರ, ಮಾರ್ಗ ಮುಂತಾದವುಗಳನ್ನು ಸುಖಕರವಾಗಿ ಮರೆತು ಪುನಃ ಮುಂದಿನ ವರ್ಷ ತಮ್ಮ ಗುರುವಿನ ಜಯಂತಿಯನ್ನು ಎದುರು ನೋಡುತ್ತಾರೆ! ಬರಬರುತ್ತಾ ಮಾಹಾತ್ಮರೆಲ್ಲರ ಜಯಂತಿಗಳು ಸರ್ಕಾರ ಕೃಪಾಪೋಷಿತ ಸಾರ್ವಜನಿಕ ಕಾರ್ಯಕ್ರಮಗಳಾಗಿ ಪರಿವರ್ತನೆಗೊಳ್ಳುತ್ತಿವೆ. ಆ ಆಚರಣೆಯಲ್ಲಿ ಸಭಿಕರರಿಗೂ ಸರ್ಕಾರಕ್ಕೂ ನಂಬಿಕೆಯಿಲ್ಲ, ಎಲ್ಲವೂ ಕಪಟನಾಟಕವಾಗಿರುತ್ತದೆ. ಗಾಂಧೀ ಜಯಂತಿಯ ಸಂದರ್ಭದಲ್ಲಿ ಈ ಮಾತುಗಳು ನೆನಪಿಗೆ ಬರಲು ಕಾರಣ ಗಾಂಧೀ ಹತ್ತೊಂಭತ್ತನೇ ಶತಮಾನದಲ್ಲಿ ಜನ್ಮ ತಾಳಿದ್ದರೂ ಈ ಇಪ್ಪತ್ತೊಂದನೇ ಶತಮಾನದಲ್ಲಿಯೂ ಇಡಿ ಜಗತ್ತಿನ ಗಾಳಿಯಲ್ಲಿ ತನ್ನ ವಿಶಿಷ್ಟ ವಿಚಾರಗಳಿಂದ ಬೆರೆತವನಾಗಿ ಅವನು ಆಗಾಗ್ಗೆ ಎಲ್ಲರ ಮನಸ್ಸಿನಲ್ಲಿ, ಕನಸಿನಲ್ಲಿ, ಭಾವನೆಯಲ್ಲಿ, ಕಲ್ಪನೆಯಲ್ಲಿ, ವಿಚಾರದಲ್ಲಿ ಒಂದಲ್ಲ ಒಂದು ರೂಪದಲ್ಲಿ ಬೆರೆತವನಾಗಿ ನಮ್ಮ ಮುಂದೆ ಈಗ ಓಡಾಡುತ್ತಿರುವನೊ ಎಂಬಂತೆ ಭಾಸವಾಗುತ್ತಿರುವುದು. ಸಾಮಾನ್ಯ ಮನುಷ್ಯನಿಂದ ಹಿಡಿದು ದೇಶಗಳ ರಾಷ್ಟ್ರಪತಿಗಳು, ಪ್ರಧಾನ ಮಂತ್ರಿಗಳು, ಆಯೋಜಕರು, ಸೇನಾನಿಗಳು, ಶಿಕ್ಷಣ ತಜ್ಞರು, ಕೃಷಿ ತಜ್ಞರು, ತಂತ್ರಜ್ಞರು, ಚಿಂತಕರು, ಮುಂತಾದ ಮಹನೀಯರ ವರೆಗೆ ಒಂದಲ್ಲ ಒಂದು ಸಂದರ್ಭದಲ್ಲಿ ಗಾಂಧೀ ವಿಚಾರವನ್ನು ಮೆಲಕು ಹಾಕದೇ ಇರುವುದಿಲ್ಲ. ಆ ಮೆಲಕು ಗಾಂಧೀ ಪ್ರಸ್ತುತತೆ ಕುರಿತು ಇರುಬಹುದು ಅಥವಾ ಅಪ್ರಸ್ತುತತೆ ಕುರಿತು ಇರಬಹದು; ಹೊಗಳಿಕೆ ಇರಬಹುದು; ಇಲ್ಲವೆ ತೆಗಳಿಕೆಯಿರಬಹುದು; ಗಾಂಧಿ ವಿಗ್ರಹ ಸ್ಥಾಪನೆಯಾಗಿರಬಹುದು ಅಥವಾ ಆ ವಿಗ್ರಹವನ್ನು ಭಿನ್ನ ಮಾಡುವುದಿರಬಹುದು; ಭಾರತದ ಸ್ವಾತಂತ್ರ್ಯ ಶಿಲ್ಪಿಯೆಂಬ ಪದವಿಯನ್ನು ಕೊಡುವುದಿರಬಹುದು; ಇಲ್ಲವೆ ದೇಶದ ವಿಭಜನೆಯ ದೋಷಿಯೆಂದಿರಬಹುದು; ದಲಿತೋದ್ಧಾರಕನೆಂಬ ಹೆಗ್ಗಳಿಕೆಯಿರಬಹುದು ಅಥವಾ ದಲಿತರ ರಾಜಕೀಯ ಸಂಘಟನೆಯ ವಿಚ್ಛಿದ್ರಕನೆಂಬ ಆಪಾದನೆಯಿರಬಹುದು; ಬ್ರಹ್ಮಚರ್ಯದ ಸಮರ್ಥಕನೆಂಬ ಮೆಚ್ಚುಗೆಯಿರಬಹುದು ಇಲ್ಲವೆ ಬ್ರಹ್ಮಚರ್ಯವ್ರತದ ವಿಕಟ ಪರೀಕ್ಷಕನೆಂಬ ಕಳಂಕಿಯಾಗಿರಬಹುದು. ತನ್ನ ಶರೀರವೇ ಒಂದು ಯಂತ್ರವೆಂದು ಹೇಳಿ ಯಂತ್ರದ ಆರಾಧಕನೆಂಬ ನಂಬಿಕೆ ಹುಟ್ಟಿಸುತ್ತ, ವಿಮಾನ, ರೈಲು ಮುಂತಾದ ಅಗತ್ಯ ಸಾರಿಗೆಗಳನ್ನು ಖಂಡಿಸುವ ಕಪಟಿಯಾಗಿರಬಹುದು; ತನ್ನನ್ನು ಸರ್ವಧರ್ಮ ಪ್ರೇಮಿಯೆಂದು ಹೇಳುತ್ತ, ಯಾವುದೋ ಒಂದು ಧರ್ಮೀಯರನ್ನು ಓಲೈಸುವ ಭ್ರಮಿಕನೆಂದಾಗಿರಬಹುದು; ತಾನು ಸ್ವತಃ ಇಂಗ್ಲಿಷ್ ವ್ಯಾಸಂಗ ಮಾಡಿ ಅದರ ಬಲದಿಂದ ನಾಯಕನಾಗಿ ಸ್ವಾತಂತ್ರ್ಯ ನಂತರ ಭಾರತೀಯರೆಲ್ಲ ಪ್ರಾದೇಶಿಕ ಭಾಷೆಗಳಲ್ಲಿಯೇ ವಿದ್ಯಾಭ್ಯಾಸ ಮಾಡಿ ಮುಂದೆ ಬರಬೇಕೆಂದು ಹೇಳುವ ಮೂರ್ಖನೆಂದಾಗಿರಬಹುದು. ಮನುಷ್ಯನ ಚಿತ್ತ ಸುಖಭೋಗದತ್ತವೇ ಹರಿಯುವುದು ಸಹಜವಾಗಿರುವಾಗ ಅದನ್ನು ಎಲ್ಲರೂ ನಿಯಂತ್ರಿಸಬೇಕೆಂದು ಪ್ರತಿಪಾದಿಸಿದ ಹುಚ್ಚನೆಂದಾಗಿರಬಹುದು. ತಾನು ಸ್ವತಃ ವಕೀಲನಾಗಿ ಜೀವನದಲ್ಲಿ ಯಶಸ್ಸು ಪಡೆದು ನಂತರ ಆ ವಕೀಲ ವೃತ್ತಿಯಷ್ಟು ಕೀಳು ವೃತ್ತಿ ಮತ್ತೊಂದಿಲ್ಲವೆಂದು ಹೇಳುವ ದ್ರೋಹಿಯೆಂದಾಗಿರಬಹುದು. ಜಿನ್ನಾ ಕ್ರಾಂಗ್ರೆಸ್ಸಿನಿಂದ ಸಿಡಿದೇಳಲು, ಮತ್ತು ಸ್ವತಂತ್ರ ಭಾರತದ ಮೊಟ್ಟ ಮೊದಲ ಪ್ರಧಾನಿ ಪಟ್ಟವನ್ನು ಅವರಿಗೆ ಕಟ್ಟುವ ಬದಲು, ನೆಹರೂಗೆ ಕಟ್ಟಿ ಹಾಗು ಪ್ರಾರಂಭದಲ್ಲಿ ಸೆಕ್ಯುಲರ್ ಆಗಿದ್ದ ಜಿನ್ನಾ ಗಾಂಧಿಯ ಹಿಂದೂ ಧರ್ಮಾಧಾರಿತ ಆಧ್ಯಾತ್ಮಿಕ ದೃಷ್ಟಿಕೋನದಿಂದ

ರೋಸಿ ಜಿನ್ನಾ ಮುಸ್ಲಿಂ ಮೂಲಭೂತವಾದಿಯಾದುದಕ್ಕೆ ಗಾಂಧೀ ಕಾರಣಿಯೆಂಬ ದೋಷಾರೋಪಣೆಯೂ ಆಗಿರಬಹುದು. ಜಗತ್ತಿನ ಬಹು ಸಂಖ್ಯಾತ ದೇಶಗಳು ತಮ್ಮ ದೇಶದ ಬಡವರ ಮೂಳೆ-ಚಕ್ಕಳದ ಮೇಲೆ ಅಣು ಅಸ್ತ್ರ ರಾಶಿಯನ್ನು ನಿರ್ಮಿಸಿದ್ದರೂ ವಿಶ್ವರಾಷ್ಟ್ರ ಸಂಸ್ಥೆ ಅಕ್ಟೋಬರ್ ಎರಡನ್ನು ವಿಶ್ವ ಅಹಿಂಸಾ ದಿನವೆಂದು ಆಚರಿಸಲು ತೀರ್ಮಾನ ಕೈಗೊಳ್ಳುವಂತೆ ಕಾಣದ ತನ್ನ ಶಕ್ತಿಯ ಮೂಲಕ ಪ್ರೇರಣೆಕೊಟ್ಟನೆಂಬ ಕಾರಣಕ್ಕಾಗಲೀ, ಬಲಿಷ್ಠ ರಾಷ್ಟ್ರವಾದ ಅಮೇರಿಕದ ಅಧ್ಯಕ್ಷ ಒಬಾಮಾ ಗಾಂಧೀಯೊಂದಿಗೆ ಸರಳವಾದ ಊಟ ಮಾಡಲು ಬಯಸುವುದಾಗಿ ಹೇಳಿದ್ದಕ್ಕೆ ಅಗೋಚರ ಭೂತನೆನಿಸಿಕೊಂಡಿರುವುದೂ ಕಾರಣವಿರಬಹುದು. ಹೀಗೆ ಒಂದಲ್ಲ ಒಂದು ಗತಿಸಿಹೋದ ಘಟನೆಗಳಿಂದಾಗಿ ಇಲ್ಲವೆ ಗಾಂಧೀವಾದ ಪ್ರಸ್ತುತ-ಅಪ್ರಸ್ತುತವೆಂಬ ಇಂದಿನ ವಿಚಾರಭೇದದ ನಿಮಿತ್ತವಾಗಿ ಗಾಂಧೀ ಸದಾ ಎಲ್ಲರನ್ನೂ ಒಂದಲ್ಲ ಒಂದು ಬಗೆಯಲ್ಲಿ ಪೀಡಿಸುತ್ತಲೇ ಇರುತ್ತಾನೆ, ಕಾಡಿಸುತ್ತಲೇ ಇರುತ್ತಾನೆ!

ಗಾಂಧೀಗೆ ಗೊತ್ತು, ತನ್ನ ಕಾಲದ ತನ್ನ ವಿಚಾರಗಳು ವರಷಗಳುರುಳಿದಂತೆ ಮತ್ತೆ ಮತ್ತೆ ತೀವ್ರತೆಯಿಂದ ಭೂಮಿಯಿಂದ ಚಿಮ್ಮಿಬರುತ್ತವೆಂದು. ಇದಕ್ಕೆ ಕಾರಣವಿಲ್ಲದಿಲ್ಲ. ತನ್ನ ವಿಚಾರಗಳು ಕೇವಲ ಬೌದ್ಧಿಕವಾಗಿರದೆ, ಪುಸ್ತಕಗಳಿಂದ ಎರವಲು ಪಡೆದಂಥವಾಗಿರದೆ ಸತ್ಯದೊಂದಿಗೆ ಅರವತ್ತು ವರ್ಷಗಳ ಕಾಲ ನಿರಂತರವಾಗಿ ನಡೆಸಿದ ಪ್ರಯೋಗದಿಂದ ಸಿದ್ಧವಾದಂಥವು ಮತ್ತು ಬದುಕಿನ ಹಾಲಾಹಲದಿಂದ ಹುಟ್ಟಿಬಂದಂಥವು. ಆ ವಿಚಾರಗಳು ಅವೈಜ್ಞಾನಿಕವೆಂದು ಯಾರಾದರೂ ಸಿದ್ಧಪಡಿಸ ಬೇಕಾದರೆ ಅವರು ಸಹ ಆ ವಿಚಾರಗಳನ್ನು ಸತ್ಯದ ಪ್ರಯೋಗಾಲಯದಲ್ಲಿಯೇ ತಮ್ಮ ಮಾತನ್ನು ಸಿದ್ಧ ಪಡಿಸಬೇಕಾಗುವುದು, ಅನ್ಯಥಾ ಇಲ್ಲ. ಈ ಮಾತನ್ನು ತಿಳಿದಿದ್ದ ವಿಜ್ಞಾನಿ ಐನ್‌ಸ್ಟನ್ ಗಾಂಧೀ ವಿಚಾರಗಳನ್ನು ಅಲ್ಲಗಳೆಯುವ ಗೋಜಿಗೆ ಹೋಗದೆ, "ಇಂಥ ಅಸಾಧಾರಣ ವಿಚಾರದ, ಅಸಾಧಾರಣ ಅನುಭವದ, ಅಸಾಧಾರಣ ದೂರದರ್ಶಿತ್ವದ ವ್ಯಕ್ತಿಯೊಬ್ಬ ಈ ಭೂಮಿಯ ಮೇಲೆ ನಡೆದಾಡಿದ್ದ ಎಂದು ಮುಂದಿನ ಜನಾಂಗ ನಂಬಲಿಕ್ಕಿಲ್ಲ" ಎಂದು ಉದ್ಗಾರ ತೆಗೆದರು. ಅಂದರೆ ಅಷ್ಟು ಮೌಲಿಕವಾದ ಜೀವನಮೌಲ್ಯಗಳನ್ನು ಗಾಂಧೀ ಪ್ರತಿಪಾದಿಸಿ ಪಾಲಿಸಿ ತೋರಿಸಿದ್ದರು. ಐನ್‌ಸ್ಟನ್‌ರೊಬ್ಬರೇ ಅಲ್ಲ, ಇನ್ನೂ ಅನೇಕ ವಿಜ್ಞಾನಿಗಳು ಪ್ರತ್ಯಕ್ಷವಾಗಿಯೋ, ಪರೋಕ್ಷವಾಗಿಯೋ ಗಾಂಧೀ ವಿಚಾರಗಳನ್ನು ಸಮರ್ಥಿಸಿದ್ದಾರಷ್ಟೇ ಅಲ್ಲ, ಮಾನವ ಕುಲದ ರಕ್ಷಣೆಗೆ ಅವು ಅಗತ್ಯವೆಂದೂ ಹೇಳಿದ್ದಾರೆ.

ಗಾಂಧೀ ಹೇಳಿದ ಮಾತು ತಿರುತಿರುಗಿ ಬೆಂಬತ್ತಿ ಬಂದು ಈ ಲೋಕದ ಜನತೆಯನ್ನು ಕಾಡುವುದೇಕೆ? ಇದಕ್ಕೆ ಬಹು ಮುಖ್ಯ ಕಾರಣ ಅಂದು ಗಾಂಧೀ ಹೇಳಿದ್ದ ಮಾತುಗಳು ಸನಾತನ ಸತ್ಯವನ್ನು ಆಧರಿಸಿದ್ದಂಥವುಗಳಾಗಿದ್ದರೆ ಇಂದಿನ ತಲೆಮಾರಿನವರ ಮಾತುಗಳು ನಿತ್ಯ ಹುಸಿ ಪ್ರೇರಿತವಾದಂಥವುಗಳು. ಇಂದಿಗೆ ಕೇವಲ ನಲ್ವತ್ತೆರಡು ವರ್ಷಗಳ ಹಿಂದೆಯಷ್ಟೆ ೧೯೩೭ರಲ್ಲಿ ಗಾಂಧೀ ತಮ್ಮ ಹರಿಜನ ಪತ್ರಿಕೆಯಲ್ಲಿ ಬರೆದಿರುವ ಕೆಳಗಿನ ಗಾಂಧೀ ವಾಕ್ಯಗಳು ಇಂದಿನ ನವ ಪೀಳಿಗೆಯವರಿಗೆ ಅರ್ಥವಾಗುವುದು ಕಷ್ಟವಾದರೂ ಅವುಗಳನ್ನು ನಿರಾಕರಿಸುವ ಸಾಮರ್ಥ್ಯವೂ ಅವರಲ್ಲಿ ಇಲ್ಲವೆಂಬುದನ್ನೂ ತೋರಿಸುತ್ತವೆ :-

"ನನ್ನ ಬರವಣಿಗೆಗಳು ನನ್ನ ದೇಹದ ಜತೆಗೇ ದಹನವಾಗತಕ್ಕದ್ದು. ನಾನು

ಏನು ಹೇಳಿದೆ, ಏನು ಬರೆದಿದ್ದೇನೆ ಎನ್ನುವುದಲ್ಲ. ಈಚೆಗೆ ಅನೇಕ ಸಲ ನಾನು ಹೇಳಿದ್ದೇನೆ – ನಮ್ಮ ವೇದಶಾಸ್ತ್ರ ಪುರಾಣಗಳೆಲ್ಲವೂ ಒಮ್ಮೆ ನಾಶವಾಗುವಂತಾದರೂ ಕೂಡ ಈಶಾವಸ್ಯೋಪನಿಷತ್ತಿನ ಒಂದು ಮಂತ್ರವು ಹಿಂದು ಧರ್ಮದ ಅರ್ಥವನ್ನು ಸಾರಲು ಸಾಕಾಗುತ್ತದೆ ಅಂತ. ಆದರೆ, ಆ ಒಂದು ಮಂತ್ರವನ್ನಾದರೂ ಬಾಳಿಕೊಳ್ಳುವವರಿಲ್ಲದಿದ್ದರೆ ಅದೂ ನಿಷ್ಪ್ರಯೋಜಕ. ಅದೇ ರೀತಿ ನಾನು ಹೇಳಿದ್ದು, ಬರೆದದ್ದು ಎಲ್ಲವೂ ಸತ್ಯ ಮತ್ತು ಅಹಿಂಸೆಯ ಮಹತ್ವವನ್ನು ಅರಗಿಸಿಕೊಳ್ಳಲು ಮಾತ್ರವೇ ಉಪಯುಕ್ತ. ನೀವು ಅವುಗಳನ್ನು ಜೀರ್ಣಿಸಿಕೊಳ್ಳದಿದ್ದರೆ ನನ್ನ ಬರವಣಿಗೆಗಳು ನಿಮಗೆ ನಿಷ್ಪ್ರಯೋಜಕ.

ಇಂದಿನ ಯುವ ಪೀಳಿಗೆಗೆ ಸತ್ಯವೆಂದರೇನು, ಅಹಿಂಸೆಯೆಂದರೇನು, ಈಶಾವಸ್ಯೋಪನಿಷತ್ ಅಂದರೇನು, ಆ ಉಪನಿಷತ್ತಿನಲ್ಲಿಯ ಯಾವ ಒಂದು ಮಂತ್ರ ಹಿಂದು ಧರ್ಮದ ಅರ್ಥವನ್ನು ಸಾರಲು ಸಾಕಾಗುತ್ತದೆಂಬುದು ಗೊತ್ತಿಲ್ಲ. ಆದರೆ ಸತ್ಯ, ಅಹಿಂಸೆ, ಈಶ್ವರನ ಸರ್ವವ್ಯಾಪ್ತಿತ್ವ ಮುಂತಾದ ವಿಚಾರಗಳು ಸನಾತನ ಸತ್ಯವಲ್ಲದೆ ಮತ್ತೇನು? ಈ ವಿಚಾರಗಳನ್ನು ತ್ಯಜಿಸಿದ ಜೀವನ ಭೂತಸದೃಶವಾಗಿರುತ್ತದೆ. ಭೂತವನ್ನು ನಿಗ್ರಹಿಸುವುದು ದೇವತಾಶಕ್ತಿ ಮಾತ್ರ. ದೇವತಾಶಕ್ತಿಯಿರುವುದು ಸನಾತನ ಸತ್ಯ ಮಾತುಗಳಲ್ಲಿಯೇ ಹೊರತು ನೀರಿನ ಗುಳ್ಳೆಗಳಲ್ಲಿಯಲ್ಲ. ಆದ್ದರಿಂದ ಭೂತಸದೃಶ್ಯರಾದ ಇಂದಿನವರನ್ನು ಸಾತ್ವಿಕ ಗಾಂಧೀ ವಿಚಾರ ಕಾಡುತ್ತಿದೆ. ಗಾಂಧೀ ವಿಚಾರದ ಕಾಟದಿಂದ ಬಿಡುಗಡೆ ಹೊಂದ ಬೇಕಾದರೆ ಗಾಂಧೀ ಮಾರ್ಗದಲ್ಲಿ ನಡೆದರೆ ಮಾತ್ರ ಅದು ಸಾಧ್ಯ.

ಪರಿಸರ ಹಾಳಾಗುತ್ತಿದೆ, ಮುಸ್ಲಿಂರಿಂದ ಭಯೋತ್ಪಾದನೆ ಹೆಚ್ಚಾಗುತ್ತಿದೆ, ಹಿಂದೂ ಮೂಲಭೂತವಾದಿಗಳು ಬೆಳೆಯುತ್ತಿದ್ದಾರೆ, ಕ್ರಿಸ್ತಾನರು ಮತಾಂತರದಂಥ ಗೊಡ್ಡು ಕಾರ್ಯಕ್ರಮದಿಂದ ಹೊರಬಂದಿಲ್ಲ, ತಥಾಕಥಿಥ ಶಿಕ್ಷಣ ತಜ್ಞರೇ ಶಿಕ್ಷಣವನ್ನು ವಾಣಿಜ್ಯಕರಣಗೊಳಿಸುತ್ತಾ, ಜೀವನಕ್ಕೆ ವಿರೋಧಮುಖಿ ಮಾಡುತ್ತಾ, ಶಿಕ್ಷಣವೆಂದರೆ ಜ್ಞಾನ ಸಂಪಾದನೆಗಿಂತ ಹಣ ಸಂಪಾದನೆಯ ಸಾಧನವೆಂದು ರೂಪಿಸುತ್ತ, ಆರೋಗ್ಯಕರ ಸಮಾಜಿಕ ಮೌಲ್ಯಗಳನ್ನು ಹಾಳುಮಾಡುತ್ತ, ಸಾಮಾಜಿಕ ಶಕ್ತಿಯನ್ನು ದುರ್ಬಲಗೊಳಿಸಿ ರಾಜ್ಯ ಶಕ್ತಿಯನ್ನು ಬಲಗೊಳಿಸುತ್ತಾ, ಶಿಕ್ಷಣ ಕ್ಷೇತ್ರದಲ್ಲಿ ರಾಜಕಾರಣವನ್ನು, ಸಾಂಪ್ರದಾಯಕ ಧರ್ಮವನ್ನು ಬೆರೆಸುತ್ತ ಅದನ್ನು ಕುಲಗೆಡಿಸಿದ್ದಾರೆ. ಸದ್ಯದ ಭವಿಷ್ಯದಲ್ಲಿ ತಿದ್ದಲಾಗದಂಥ ದುಃಸ್ಥಿತಿಗೆ ದೇಶವನ್ನು ತಂದೊಡ್ಡಿದ್ದಾರೆ. ಇಂದಿನ ಶಿಕ್ಷಣ ವ್ಯವಸ್ಥೆಯಿಂದ ದೇಶದ ಗ್ರಾಮಗಳೆಲ್ಲವೂ ನಾಶಹೊಂದಿವೆ; ಜನರು ತಮ್ಮ-ತಮ್ಮ ಸ್ಥಳಗಳಿಂದ ಪಲ್ಲಟಗೊಳಿಸಲ್ಪಡುತ್ತಿದ್ದಾರೆ; ಇಡೀ ಜಾಗತಿಕ ಅರ್ಥ ವ್ಯವಸ್ಥೆಯೇ ಕುಸಿಯುವಂತೆ ಮಾಡಿದ್ದಾರೆ. ಹಿಂದಕ್ಕೆ ಇಂಗ್ಲಿಷರು ಭಾರತವನ್ನು ತಮ್ಮ ಹಿಡಿತದಲ್ಲಿಡಲು ಯಾವೆಲ್ಲ ಕ್ರಮಗಳನ್ನು ಕೈಗೊಂಡರೋ ಅಂಥದೇ ಕ್ರಮಗಳನ್ನು ಸ್ವತಂತ್ರ ಭಾರತದ ಸರ್ಕಾರ ಕೈಗೊಂಡು ದೇಶವನ್ನು ದೈತ್ಯಾಕಾರದ ಬಹುರಾಷ್ಟ್ರೀಯ ಕಂಪನಿಗಳಿಗೆ ಒಪ್ಪಿಸಿಕೊಡುವ ಕೆಲಸವನ್ನು ಮಾಡುತ್ತಿದೆ. ಅಂದರೆ ದೇಶದ ಸ್ವಾತಂತ್ರ್ಯದ ಹರಣಕ್ಕೆ ಏನೆಲ್ಲ ಪರಿಸ್ಥಿತಿಯನ್ನು ದೇಶದಲ್ಲಿ ಉಂಟುಮಾಡಬೇಕೊ ಅಂಥ ಪರಿಸ್ಥಿತಿಯನ್ನು ನಿರ್ಮಿಸುತ್ತಿದೆ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಇಂಥ ಪರಿಸ್ಥಿತಿ ಉಂಟಾಗಬಹುದೆಂದು ಮುಂದುಗಾಣಿದ್ದ ಗಾಂಧೀ ಸ್ವಾತಂತ್ರ್ಯ ಪೂರ್ವದಲ್ಲಿ ಕೇವಲ ಎರಡು ತಿಂಗಳು ಮೊದಲೇ ಈ ರೀತಿ ಹೇಳಿದ್ದರು: "ಸ್ವಾತಂತ್ರ್ಯಕ್ಕೆ

ಧಕ್ಕೆಯುಂಟಾಗುವುದಾದರೆ ಅದಕ್ಕೆ ಸಾಕ್ಷಿಯಾಗಲು ನಾನು ಪ್ರಾಯಶಃ ಬದುಕುವುದಿಲ್ಲ. ಮುಂದಿನ ಜನಾಂಗದವರು ತಿಳಿದುಕೊಳ್ಳಲಿ ಅಂಥ ಕೇಡಿನ ಬಗ್ಗೆ ಯೋಚಿಸುತ್ತ ಈ ಮುದುಕನು ಎಂಥ ವಿಹ್ವಲತೆಯನ್ನು ಅನುಭವಿಸಿದ ಎನ್ನುವುದನ್ನು."

ಗಾಂಧೀಜಿಯವರ ಆ ವಿಹ್ವಲಕ್ಕೆ ಕಾರಣ ರಾಜಕೀಯ ಕಾರಣಗಳಿಗಿಂತ ಹೆಚ್ಚಾಗಿ ಭಾರತೀಯರ ನೈತಿಕ ಅಧಃಪತನ ಕಾರಣವಾಗಿತ್ತು. ಇದನ್ನು ತಿಳಿದೇ ಗಾಂಧೀಜಿ ಸ್ವಾತಂತ್ರ್ಯ ಬರುವುದಕ್ಕೆ ಎರಡು ದಶಕಗಳ ಮೊದಲೆ ತಮ್ಮ ಯಂಗ್ ಇಂಡಿಯಾ ಪತ್ರಿಕೆಯಲ್ಲಿ ೧೯೨೫ರಲ್ಲಿ ಏಳು ಪ್ರಕಾರದ ಸಾಮಾಜಿಕ ಪಾತಕಗಳನ್ನು ತಿಳಿಸಿದ್ದರು. ಆ ಪಾತಕಗಳು ಇಂತಿವೆ :-

೧. ತತ್ವರಹಿತ ರಾಜಕಾರಣ;
೨. ದುಡಿಮೆಯಿಲ್ಲದ ಸಂಪತ್ತು;
೩. ನೀತಿವಿಹೀನ ವಾಣಿಜ್ಯ;
೪. ಶೀಲವಿಲ್ಲದ ಶಿಕ್ಷಣ;
೫. ಆತ್ಮಸಾಕ್ಷಿ ರಹಿತ ಭೋಗ;
೬. ಮಾನವತಾ ಶೂನ್ಯ ವಿಜ್ಞಾನ;
೭. ತ್ಯಾಗವಿಲ್ಲದ ಪೂಜೆ.

ಮೇಲ್ಕಾಣಿಸಿದ ಸಪ್ತ ಪಾತಕಗಳು ಈಗಾಗಲೇ ಬಹಳಷ್ಟು ಜನರಿಗೆ ತಿಳಿದಿದೆ. ರಾಷ್ಟ್ರ ರಾಜಕಾರಣದ ನೇತಾರರಿಗೂ ತಿಳಿದಿವೆ.

ದುರಂತವೆಂದರೆ ದೇಶವಾಸಿಗಳಾರೂ ಈ ಪಾತಕಗಳ ಬಗ್ಗೆ ಜಾಗರೂಕರಾಗಿಲ್ಲ. ಈ ಪಾತಕಗಳನ್ನು ಗಾಂಧೀಜಿ ಪ್ರಸ್ತಾಪಿಸಿದ್ದಾಗ ಅವರು ಅವುಗಳನ್ನು ಕೇವಲ ಬೌದ್ಧಿಕ ಕಸರತ್ತಾಗಿ ಸ್ವೀಕರಿಸದೆ, ಹೃದಯ ಪೂರ್ವಕವಾಗಿ ಸ್ವೀಕರಿಸಿ ಆ ಪಾಪಗಳನ್ನು ದೂರವಿಡುವಂತಾಗಬೇಕೆಂದು ಬಯಸಿದ್ದರು. ಆದರೆ ಸ್ವತಂತ್ರ ಭಾರತದಲ್ಲಿ ಆದದ್ದೇನು? ಎಲ್ಲ ಕ್ಷೇತ್ರಗಳಲ್ಲಿಯ ಎಲ್ಲ ಬೆಳವಣಿಗೆಗಳು ಆ ಏಳೂ ಪಾತಕಗಳನ್ನು ಎತ್ತಿ ಮುದ್ದಾಡಿಕೊಳ್ಳುತ್ತಿವೆ! ಆದ್ದರಿಂದ ದೇಶದ ರಾಜಕಾರಣ ಅಧೋಗತಿಗೆ ಇಳಿದಿದೆ; ಆರ್ಥಿಕ ಪರಿಸ್ಥಿತಿ ದುರಂತದ ದಾರಿ ಹಿಡಿದಿದೆ; ರೈತರು ದಿನ ನಿತ್ಯ ಆತ್ಮಹತ್ಯ ಮಾಡಿಕೊಳ್ಳುತ್ತಿದ್ದಾರೆ; ಕೈಗಾರಿಕೋದ್ಯಮಿಗಳು ಸ್ವಾರ್ಥಿಗಳಾಗಿದ್ದಾರೆ; ವಣಿಕರು ಮೋಸಗಾರರಾಗಿದ್ದಾರೆ; ಅಧಿಕಾರಿಗಳು ಭ್ರಷ್ಟರಾಗಿದ್ದಾರೆ; ನ್ಯಾಯಾಧೀಶರು ಬದ್ಧತಾಹೀನರಾಗಿದ್ದಾರೆ; ಯುವಕರು ದಾರಿ ತಪ್ಪಿದವರಾಗಿದ್ದಾರೆ; ಸ್ತ್ರೀಯರ ಮಾನ ಮಾರುಕಟ್ಟೆಯ ಸರಕಾಗಿದೆ; ದೇಶದಲ್ಲಿ ಹಿಂಸೆ ತಾಂಡವವಾಡುತ್ತಿದೆ; ಸರ್ಕಾರ ಅಣು ಅಸ್ತ್ರಗಳ ತಯಾರಿಕೆಯಲ್ಲಿ ತೊಡಗಿದೆ; ಜನರು ಶರೀರಶ್ರಮ ಮರೆತು, ಸಮಾಜ ಧರ್ಮ ಮರೆತು ಸುಖಲೋಲುಪರಾಗುತ್ತಿದ್ದಾರೆ. ಒಟ್ಟಾರೆ ಧರ್ಮ ಗ್ಲಾನಿಯಾಗುತ್ತಿದೆ.

ದೇಶ ಪುನಃ ಧರ್ಮದ ದಾರಿ ಹಿಡಿಯಲೆಂದೇ ಗಾಂಧೀಜಿ ತಮ್ಮ ಜೀವಿತದ ಕೊನೆಯ ದಿನದವರೆಗೂ "ಸಬ್‌ಕೋ ಸನ್ಮತಿ ದೇ ಭಗವಾನ್" ಎಂದು ಪ್ರಾರ್ಥಿಸಿದರು.

* * *

ಕರ್ನಾಟಕದ ಸ್ವರೂಪ ಹೇಗಿರಬೇಕು?

ಯಾವ ಶ್ರಮ ಶಕ್ತಿಯ ಆಧಾರದ ಮೇಲೆ ಇಡೀ ಜಗತ್ತು ನಿಂತಿದೆಯೋ ಆ ಶ್ರಮ ಶಕ್ತಿಯನ್ನು ಧಾರೆಯೆರೆದು ಪೋಷಿಸುತ್ತಿರುವವರೇ ಸಂಕಟದಲ್ಲಿದ್ದಾರೆ. ರೈತರು-ಕಾರ್ಮಿಕರು, ದಲಿತರು, ಹಿಂದುಳಿದವರು, ಮಹಿಳೆಯರು, ಆದಿವಾಸಿಗಳು, ಅಲ್ಪಸಂಖ್ಯಾತರು ಇವರು ಸಂಪತ್ತಿನ ಬಹಳ ಚಿಕ್ಕ ಪಾಲನ್ನು ಅನುಭವಿಸುತ್ತಿದ್ದಾರೆ. ಈ ಚಿತ್ರಣ ಬದಲಾಗಬೇಕು. ಭೂಮಿಯೂ ಸೇರಿದಂತೆ ನಾಡಿನ ಎಲ್ಲಾ ಸಂಪನ್ಮೂಲಗಳು ಸಮಾನವಾಗಿ ಹಂಚಿಕೆಯಾಗಿದಿದ್ದರೆ, ಇಂತಹ ಅಸಮಾನತೆಯು ಬದಲಾಗದು. ಉಳುವ ರೈತರೇ ಭೂಮಿಯ ಒಡೆಯರಾಗಬೇಕು. ಆ ಭೂಮಿಯಲ್ಲಿ ಬೆಳೆದುದ್ದಕ್ಕೆ ಸರಿಯಾದ ಬೆಲೆ ಸಿಗಬೇಕು. ನಿಜವಾದ ಪ್ರಜಾಪ್ರಭುತ್ವದಲ್ಲಿ ಜಗತ್ತಿನ ದೊಡ್ಡ ಕುಬೇರರೂ, ಆತ್ಮಹತ್ಯೆ ಮಾಡಿಕೊಳ್ಳುವ ರೈತರೂ ಒಟ್ಟೊಟ್ಟಿಗೆ ಇರುವ ಪರಿಸ್ಥಿತಿ ಹೇಗೆ ತಾನೇ ಇರಲು ಸಾಧ್ಯ? ದಿನವಿಡೀ ದುಡಿದರೂ ನೂರು ರುಪಾಯಿ ಕಾಣದ ಅಸಂಘಟಿತ ವಲಯದ ಕಾರ್ಮಿಕರು, ಅದೇ ಕಾರ್ಮಿಕರ ಬೆವರಿನ ಫಲವಾಗಿ ನಿಮಿಷವೊಂದಕ್ಕೆ ಲಕ್ಷಕೋಟಿಗಳನ್ನು ಸಂಪಾದಿಸುವ ಬಂಡವಾಳಶಾಹಿಗಳೂ ಇರುವ ವ್ಯವಸ್ಥೆ ತಪ್ಪಬೇಕು. ಎಂಟು ಗಂಟೆಗಳ ಕಾಲ ಕೆಲಸ ಮಾಡಿದರೆ ನೆಮ್ಮದಿಯಿಂದ ಬದುಕುವ ಪರಿಸ್ಥಿತಿಯ ನಿರ್ಮಾಣ ಏಕೆ ಸಾಧ್ಯವಿಲ್ಲ? ಏಕೆಂದರೆ ಆ ದುಡಿಯುವ ಜನತೆಯ ಶ್ರಮದಿಂದ ಸೃಷ್ಟಿಯಾಗುವ ಸಂಪತ್ತಿನ ದೊಡ್ಡ ಪಾಲು ಅವರದಾಗುತ್ತಿಲ್ಲ. ಹಾಗಾದಾಗ ದುಡಿಮೆಯ ವರ್ಷಗಳಲ್ಲಿ ದೇಹವನ್ನು ಸವೆಸಿದವರಿಗೆ ನಿವೃತ್ತಿಯ ನಂತರದಲ್ಲಿ ನೆಮ್ಮದಿಯ ಜೀವನವೂ ಖಾತ್ರಿಯಾಗುತ್ತದೆ; ವೃದ್ಧಾಪ್ಯದಲ್ಲಿ ಬೀದಿಗೆ ಬೀಳುವವರು, ಭಿಕ್ಷುಕರು ಇರದಂತಾಗುತ್ತದೆ. ಅಂತಹ ಕರ್ನಾಟಕದ ನಿರ್ಮಾಣ ಖಂಡಿತ ಸಾಧ್ಯವಾಗುತ್ತದೆ.

ದೇಶದ ಅನ್ನದಾತ, ಬೆನ್ನೆಲುಬು ಎಂದು ಕರೆಯಿಸಿಕೊಳ್ಳುವ ರೈತರಿಗೆ ಆಧುನಿಕ ತಂತ್ರಜ್ಞಾನವೂ ದಕ್ಕಬೇಕು; ನಿಸರ್ಗ ಸ್ನೇಹಿಯಾದ ಕೃಷಿ ಪದ್ಧತಿ ಮತ್ತು ನೀರಾವರಿ ವ್ಯವಸ್ಥೆಯನ್ನ ತರುವುದು ಇಂದು ಲಭ್ಯವಿರುವ ಸಂಪನ್ಮೂಲಗಳಿಂದಲೇ ಸಾಧ್ಯ. ರೈತರು ಬೆಳೆದ ಬೆಳೆಗೆ ಸರಿಯಾದ ಬೆಲೆ ಸಿಗುವುದಾದಲ್ಲಿ ಆರಂಭಿಕ ನೆರವು / ಸಬ್ಸಿಡಿಗಳಾಚೆ ಏನನ್ನೂ ಕೇಳರು.

ಇಂದು ಬಹುಸಂಖ್ಯಾತ ಜನರು ತಮ್ಮ ದಿನನಿತ್ಯದ ಆಹಾರಕ್ಕೆ ತಮ್ಮ ಆದಾಯದ ಬಹುಪಾಲನ್ನು ವ್ಯಯಿಸುವಂತಾಗಿದೆ. ಹಾಗಾಗದೆ ಬಹುಸಂಖ್ಯಾತ ಜನರಿಗೆ ತಮ್ಮ ಮೂರು ಹೊತ್ತಿನ ಊಟದಾಚೆಗೆ ಆರೋಗ್ಯ, ಶಿಕ್ಷಣ ಇತ್ಯಾದಿಗಳಿಗೂ ಸಾಕಾಗುವಷ್ಟು ಜೀವನ ಮಟ್ಟದಲ್ಲಿ ಏರಿಕೆಯಾಗಬೇಕು. ಆಗ ಇನ್ನೂ ಹೆಚ್ಚಿನ ಆಹಾರ ಸಾಮಗ್ರಿಗಳಿಗೆ, ವಿವಿಧ ರೀತಿಯ ಸರಕುಗಳಿಗೆ ಬೇಡಿಕೆ ತನ್ನಂತೆ ತಾನೇ ಹೆಚ್ಚುತ್ತದೆ. ಇದು ಮತ್ತೆ ಬಹುಸಂಖ್ಯಾತ ರೈತ-ಕಾರ್ಮಿಕರಿಗೆ ಹೆಚ್ಚಿನ ಆದಾಯವನ್ನೂ, ಉದ್ಯೋಗವನ್ನೂ ಸೃಷ್ಟಿಸುತ್ತದೆ. ಇಂದು ಹಾಗಾಗದೇ ಲಕ್ಷ-ಕೋಟಿಗಳ ಸಂಪತ್ತು ಕೆಲವರಲ್ಲೇ ಸಿಕ್ಕಿಕೊಂಡಿರುವುದರಿಂದ ನಿಜವಾದ ಅಭಿವೃದ್ಧಿ ಸಾಕಾಗುತ್ತಿಲ್ಲ. ನಿಜವಾದ ಅಭಿವೃದ್ಧಿಯು ಬಹುಸಂಖ್ಯಾತ ಜನರ ಏಳಿಗೆಯಲ್ಲೇ ಅಡಗಿದೆ.

ಜಾತಿ ಶ್ರೇಣೀಕರಣದ ಏಣಿಯಲ್ಲಿ ಕೆಳಗಿರುವವರಲ್ಲಿ ಒಂದಷ್ಟು ಮೇಲ್‌ಚಲನೆ ಸಾಧ್ಯವಾಗಿದ್ದರೂ ಸಹ, ಅದು ಬೆರಳೆಣಿಕೆಯ ಜನರಿಗೆ ಮಾತ್ರ ಸೀಮಿತವಾಗಿದೆ. ಅಲ್ಲದೆ ಸಾಮಾಜಿಕವಾಗಿ ಜಾತಿ-ಅಸ್ಪೃಶ್ಯತೆಗಳು ನಗರ/ಪಟ್ಟಣಗಳನ್ನೂ ಬಿಡದೆ ಹೈಟೆಕ್ ಸಿಟಿಯಲ್ಲೂ ಮುಂದುವರೆದಿವೆ. ಇದು ಅಮಾನವೀಯವಾದುದು, ಅಪ್ರಜಾತಾಂತ್ರಿಕವಾದುದು. ಇದಕ್ಕೆ ಜನಪರ ಕರ್ನಾಟಕದಲ್ಲಿ ಆಸ್ಪದವಿರಬಾರದು. ಇದನ್ನು ಬಗೆಹರಿಸಲು ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ನೆಲೆಯಲ್ಲಿ ಸಾಧ್ಯವಿರುವ ಎಲ್ಲವನ್ನೂ ಮಾಡಬೇಕು. ಜಾತಿ ಆಧಾರಿತ ಶೋಷಣೆ ಇರುವವರೆಗೂ ಜಾತಿ ಆಧಾರಿತ ಮೀಸಲಾತಿ ಇರಬೇಕು. ಒಳ ಮೀಸಲಾತಿ ಎನ್ನುವುದು ಇದರೊಳಗೇ ಮತ್ತಷ್ಟು ಪ್ರಜಾತಂತ್ರೀಕರಣಕ್ಕಾಗಿನ ನ್ಯಾಯಯುತ ಬೇಡಿಕೆಯಾಗಿದೆ; ಆದರೆ ಅದು ಶೋಷಿತರ ನಡುವೆಯೇ ಒಡಕು ತರಲು ಬಳಕೆಯಾಗಬಾರದಷ್ಟೇ.

ಜನಸಂಖ್ಯೆಯ ಅರ್ಧದಷ್ಟಿರುವ ಮಹಿಳೆಯರು ಮನೆಯ ಹೊರಗೆ ಕಡಿಮೆ ದರದ ನಿಷ್ಠಾವಂತ ಕೂಲಿಯಾಳುಗಳಾಗಿ, ಮನೆಯೊಳಗೆ ಸಂಬಳವೇ ಇಲ್ಲದ ಬಿಟ್ಟಿ ಚಾಕರಿ ಮಾಡುವವರಾಗಿ, ಮಾಧ್ಯಮಗಳಲ್ಲಿ ದೇಹ ಪ್ರದರ್ಶನದ ಗೊಂಬೆಗಳಾಗಿ ಒಟ್ಟಿನಲ್ಲಿ ಎರಡನೆಯ ದರ್ಜೆಯಲ್ಲಿ ಪ್ರಜೆಗಳಿಗಾಗಿ ಬದುಕುತ್ತಿದ್ದಾರೆ. ಸಮಾಜದ ಬೆಳವಣಿಗೆಯ ಭಾಗವಾಗಿ ಒಂದು ವರ್ಗದ ಮಹಿಳೆಯರಿಗೆ ಒಂದಷ್ಟು ಮಟ್ಟಿಗೆ ಬಿಡುಗಡೆ ಸಿಕ್ಕಿದೆಯಾದರೂ, ಮಹಿಳೆಯರಿಗೆ ಬದುಕಿನ ಎಲ್ಲ ಸ್ತರಗಳಲ್ಲಿ ಸಮಾನತೆಯು ಇನ್ನೂ ಬಹು ದೂರವೇ ಉಳಿದಿದೆ. ಈ ದೂರ ಇಲ್ಲವಾಗಬೇಕು. ಮಹಿಳೆಗೆ ಎಲ್ಲೆಡೆ ಸಮಾನ ಹಕ್ಕುಗಳು ದೊರೆಯಬೇಕು. ಹೊಟ್ಟೆ ಹೊರೆಯಲಿಕ್ಕಾಗಿ ಮೈ ಮಾರಿಕೊಳ್ಳುವ ಪರಿಸ್ಥಿತಿ ಇರಲೇಬಾರದು. ವರದಕ್ಷಿಣೆ, ಹಸಿ ಹಸಿ ಕೌಟುಂಬಿಕ ಮತ್ತು ಸಮಾಜಿಕ ದೌರ್ಜನ್ಯ, ಮನೆಗೆಲಸಕ್ಕೆ ಸೀಮಿತವಾಗಿರುವುದು, ಹೆಣ್ಣು ಭ್ರೂಣ ಹತ್ಯೆ, ಕಡಿಮೆ ಸಂಬಳದ ದುಡಿಮೆ, ಶಿಕ್ಷಣವೂ ಒಳಗೊಂಡಂತೆ ವಿವಿಧ ಆಯಾಮಗಳಲ್ಲಿ ತಾರತಮ್ಯ ಇಂತಹ ಮೇಲ್ನೋಟಕ್ಕೇ ಕಾಣುವ ಅಂಶಗಳಲ್ಲದೆ, ವಿವಿಧ ಸೂಕ್ಷ್ಮ ರೀತಿಯ ತಾರತಮ್ಯಗಳನ್ನೂ ನಿವಾರಿಸಬೇಕು. ಲೈಂಗಿಕ ಅಲ್ಪಸಂಖ್ಯಾತರನ್ನು ಕೀಳಾಗಿ ಕಾಣುವ ಪರಿಸ್ಥಿತಿಯನ್ನು ಹೋಗಲಾಡಿಸಬೇಕು. ಅವರ ನ್ಯಾಯ ಬದ್ಧ ಹಕ್ಕುಗಳನ್ನು ಎತ್ತಿಹಿಡಿಯಬೇಕು.

ವಿಶ್ವದೆಲ್ಲೆಡೆ ಪ್ರಜಾತಂತ್ರದ ಪರಿಕಲ್ಪನೆ ಬೆಳೆದ ಹಾಗೆಲ್ಲಾ, ಪ್ರಜಾಪ್ರಭುತ್ವವೆಂದರೆ ಬಹುಸಂಖ್ಯಾತರ ಅಣತಿಯ ಮೇರೆಗೆ ಎಲ್ಲವೂ ನಡೆಯಬೇಕೆಂದು ಅರ್ಥವಲ್ಲ, ಬದಲಿಗೆ ಆಯಾ ಸಮಾಜದಲ್ಲಿನ ಅಲ್ಪಸಂಖ್ಯಾತರಿಗೆ ವಿಶೇಷ ಹಕ್ಕುಗಳ ಖಾತರಿ ಇದ್ದೇ ಇರುತ್ತದೆ ಎಂಬುದು ನಿರೂಪಿತವಾಗಿದೆ. ಆದರೆ ವಿವಿಧ ರೀತಿಯಲ್ಲಿ ಅಲ್ಪಸಂಖ್ಯಾತರು ಶೋಷಣೆಗೊಳಗಾಗುತ್ತಲೇ ಇದ್ದಾರೆ. ಅದು ಧರ್ಮ/ಭಾಷೆ/ರಾಷ್ಟ್ರೀಯತೆ/ಜನಾಂಗ/ಜಾತಿ ಹೀಗೆ ಹಲವು ರೀತಿಯ ತಾರತಮ್ಯದಲ್ಲಿ ವ್ಯಕ್ತವಾಗುತ್ತಿರುತ್ತದೆ. ಈ ತಾರತಮ್ಯವು ಇಲ್ಲವಾಗಬೇಕು. ಹಿಂದೂ ಕೋಮುವಾದವು ಹೆಚ್ಚೆಚ್ಚು ವಿಜೃಂಭಿಸಿದ ಹಾಗೆಲ್ಲಾ ಧಾರ್ಮಿಕ ಅಲ್ಪಸಂಖ್ಯಾತರು ಹೆಚ್ಚೆಚ್ಚು ಅಬಧ್ರತೆಗೆ ಒಳಗಾಗುತ್ತಾಯಿದ್ದಾರೆ. ಅಷ್ಟು ಮಾತ್ರವಲ್ಲ, ಹೆಚ್ಚೆಚ್ಚು ತಮ್ಮ ಧರ್ಮದ ಮೂಲಭೂತವಾದಿಗಳ ತೆಕ್ಕೆಗೆ ದೂಡಲ್ಪಡುತ್ತಿದ್ದಾರೆ. ಇದು ಭಯೋತ್ಪಾದನಾ ಕೃತ್ಯಗಳೆಂದು ಕರೆಯಲ್ಪಡುತ್ತಿರುವ ಭೀಕರ ಹಿಂಸಾಕಾಂಡಕ್ಕೂ ಕಾರಣವಾಗುತ್ತಿದೆ. ಇದರ ಮೂಲವು ಬಹುಸಂಖ್ಯಾತ ಕೋಮುವಾದದಲ್ಲಿರುವುದರಿಂದ

ಅದರ ವಿರುದ್ಧ ಪ್ರಬಲ ಹೋರಾಟ ನಡೆಯಬೇಕು. ಅದರ ಜೊತೆ ಜೊತೆಗೇ ಎಲ್ಲ ಧರ್ಮಗಳ ಮೂಲಭೂತವಾದವನ್ನೂ ಇಲ್ಲವಾಗಿಸಬೇಕು. ಭಾರತದಲ್ಲಿ ಕೋಮುವಾದವು ಪ್ರಚ್ಛನ್ನ ಫ್ಯಾಸಿಸಂ ಆಗುವತ್ತ ಸಾಗುತ್ತಿರುವ ಈ ಸಂದರ್ಭದಲ್ಲಿ, ಪ್ರಗತಿಪರರ ನಡುವೆ ಸಾಧ್ಯವಾದಷ್ಟೂ ವಿಶಾಲ ನೆಲೆಯ ಐಕ್ಯತೆ ಅಗತ್ಯವಾಗಿದೆ.

ಈ ನಾಡಿನ ಅರಣ್ಯ, ಖನಿಜ ಸಂಪತ್ತು, ನದಿಗಳು ಎಲ್ಲವೂ ಇಲ್ಲಿನ ಜನರದ್ದಾಗಬೇಕು. ಆದಿವಾಸಿಗಳಿಗೆ ಎತ್ತಂಗಡಿಯ ಭಯವಿಲ್ಲದ ಜೀವನದ ಜೊತೆಗೇ ಅಭಿವೃದ್ಧಿಯೂ ಬೇಕು.

ಸಾಮಾಜಿಕ, ಸಾಂಸ್ಕೃತಿಕ ನೆಲೆಗಳಲ್ಲಿ ಮೇಲು-ಕೀಳಿನ ಅಂಶಗಳು ಬಹಳ ಗಾಢವಾಗಿ ಈ ಸಮಾಜವನ್ನು ಆವರಿಸಿವೆ. ಆ ಜಾಗದಲ್ಲಿ ಜನಪರವಾದ, ಸಮಾನತೆ, ಸೌಹಾರ್ದವನ್ನು ಪ್ರತಿಫಲಿಸುವ ಆಚರಣೆಗಳಿಗೆ ಒತ್ತು ನೀಡಬೇಕಿದೆ. ಪರ್ಯಾಯ ಜನಸಂಸ್ಕೃತಿಯ ಚಿಂತನೆ ಆಗಬೇಕು ಮತ್ತು ಇಡೀ ಸಮಾಜವು ಎಲ್ಲಾ ಸ್ತರಗಳಲ್ಲಿ ಪ್ರಜಾತಾಂತ್ರಿಕಗೊಳ್ಳಬೇಕಿದೆ.

ಕರ್ನಾಟಕದ ಪ್ರಮುಖ ಭಾಷೆಯಾಗಿರುವ, ಈ ನಾಡಿನ ರಚನೆಗೂ ಮೂಲಾಧಾರವಾಗಿರುವ ಕನ್ನಡವು ಸಾವಿರಾರು ವರ್ಷಗಳ ಇತಿಹಾಸವನ್ನು ಹೊಂದಿರುವ ಮತ್ತು ಜೀವಂತವಿರುವ ಭಾಷೆಯಾಗಿದೆ. ಕನ್ನಡಿಗರ ಬದುಕು ಹೇಗೆ ಸಂಕಷ್ಟಕ್ಕೆ ಸಿಲುಕಿದೆಯೋ, ಅದೇ ರೀತಿ ಭಾಷೆಯೂ ಇದೆ. ಅಖಿಲ ಭಾರತ ಮಟ್ಟದಲ್ಲಿ ಹಿಂದಿಯನ್ನು ಮಾತ್ರ ರಾಷ್ಟ್ರಭಾಷೆಯಾಗಿ ಪರಿಗಣಿಸಲಾಗುತ್ತಿದೆ. ಹಿಂದಿಯೂ ಸೇರಿದಂತೆ ಈ ದೇಶದ ಎಲ್ಲ ಜನಭಾಷೆಗಳೂ ರಾಷ್ಟ್ರಭಾಷೆಗಳಾಗಬೇಕು. ಇಂಗ್ಲಿಷ್ ಕಲಿಯದಿದ್ದರೆ ಬದುಕೇ ಇಲ್ಲ ಎಂಬಂತಾಗಿರುವುದರಿಂದ, ಸಾಮಾಜಿಕ ನ್ಯಾಯದ ದೃಷ್ಟಿಯಿಂದ ಒಂದನೇ ತರಗತಿಯಿಂದಲೇ ಎಲ್ಲರಿಗೂ ಇಂಗ್ಲಿಷ್ ಕಲಿಸಬೇಕು ಎಂದು ಪ್ರಗತಿಪರ ಸಂಘಟನೆಗಳೂ ಒತ್ತಾಯಿಸುವಂತಾಗಿದೆ. ಕನ್ನಡ ಮಾತ್ರ ಕಲಿತವರ ಬದುಕು ಹಸನಾಗುವಂತೆ ಆಗಬೇಕು, ಆಗ ಇಂಗ್ಲಿಷಿಗಿರುವ ಮಾನ್ಯತೆ ಕನ್ನಡಕ್ಕೂ ಸಿಗುತ್ತದೆ. ಆಡಳಿತದಲ್ಲಿ, ಶಿಕ್ಷಣದಲ್ಲಿ, ಉದ್ಯೋಗವಕಾಶಗಳಲ್ಲಿ, ಸಾಮಾಜಿಕ ಸ್ಥಾನಮಾನದಲ್ಲಿ ಎಲ್ಲೆಡೆಯೂ ಕನ್ನಡಕ್ಕೆ ಮಾನ್ಯತೆ ಸಿಗುವಂತಾಗಬೇಕು. ಮಾತೃಭಾಷೆಯೇ ಶಿಕ್ಷಣ ಮಾಧ್ಯಮವಾಗಬೇಕು.

ಜೊತೆಗೆ ಕರ್ನಾಟಕದ್ದೇ ಭಾಷೆಗಳಾಗಿರುವ ತುಳು, ಕೊಡವ, ಉರ್ದು, ಲಂಬಾಣಿ, ಬ್ಯಾರಿ ಇತ್ಯಾದಿ ಭಾಷೆಗಳೂ ಜನಭಾಷೆಗಳಾಗಿದ್ದು ಅವಕ್ಕೂ ಸೂಕ್ತ ಸ್ಥಾನಮಾನ ಸಲ್ಲಬೇಕು. ಕೊಡಗು ಮತ್ತು ಹೈದ್ರಾಬಾದ್ ಕರ್ನಾಟಕದ ಜನಸಮುದಾಯದ ಒಂದು ವಿಭಾಗ ಪ್ರತ್ಯೇಕ ರಾಜ್ಯಕ್ಕಾಗಿ ಒತ್ತಾಯಿಸುತ್ತಿವೆ. ಅದಕ್ಕೆ ಸಿಕ್ಕಿರುವ ಮಾನ್ಯತೆ ಕೇವಲ ಭಾವನಾತ್ಮಕವಾದುದಲ್ಲ, ಬದಲಿಗೆ ತಮ್ಮ ಭಾಗದ ಸಂಪನ್ಮೂಲಗಳಲ್ಲಿ ತಮಗೆ ಸರಿಯಾದ ಪಾಲಿಲ್ಲ ಎಂಬುದು ಮತ್ತು ಆ ಭಾಗವನ್ನು ತಾರತಮ್ಯದ ಧೋರಣೆಯಿಂದ ನೋಡಲಾಗುತ್ತಿದೆ ಎಂಬ ಕಾರಣಕ್ಕೇ ಆಗಿದೆ. ಈ ತಾರತಮ್ಯದ ವಿರುದ್ಧದ ಹೋರಾಟದಲ್ಲಿ ಕರ್ನಾಟಕದ ಮಿಕ್ಕ ಭಾಗದ ಜನತೆಯೂ ಸೇರಿಕೊಳ್ಳದಿದ್ದರೆ, ಪ್ರತ್ಯೇಕ ರಾಜ್ಯದ ಬೇಡಿಕೆ ನಿಜಕ್ಕೂ ನ್ಯಾಯಸಮ್ಮತವಾಗಿಬಿಡುತ್ತದೆ. ಆ ಹೋರಾಟವನ್ನು ಮಾಡುತ್ತಿರುವವರೂ ಸಹ ಕೇವಲ ಪ್ರತ್ಯೇಕ ರಾಜ್ಯವು ಈ ಸಮಸ್ಯೆಗಳಿಗೆ ಪರಿಹಾರವಲ್ಲ ಎಂಬುದನ್ನು ಅರಿಯಬೇಕಿದೆ. ೪೭ರ ನಂತರ ಬಂದ

ಎಲ್ಲಾ ಸರ್ಕಾರಗಳೂ ಇಂತಹ ಪ್ರಾದೇಶಿಕ ಅಸಮಾನತೆಯನ್ನು ಬಗೆಹರಿಸಲು ಪ್ರಾಮಾಣಿಕ ಪ್ರಯತ್ನವನ್ನು ಮಾಡಿಲ್ಲದಿರುವ ಹಿನ್ನೆಲೆಯಲ್ಲಿ, ನಾಡಿನ ಎಲ್ಲ ಜನರೂ ಅಂತಹ ಕ್ರಮಗಳಿಗಾಗಿ ಒತ್ತಾಯಿಸುವ ಕೆಲಸವನ್ನು ಮಾಡಬೇಕಿದೆ.

ಕನ್ನಡವು ತನ್ನ ಸುತ್ತಮುತ್ತಲಿನ ತೆಲುಗು, ತಮಿಳು, ಮಲಯಾಳಂಗಳಂತೆ ದ್ರಾವಿಡ ಮೂಲದ ಭಾಷೆಯಾಗಿದ್ದು, ಈ ಭಾಷೆಗಳು ಪರಸ್ಪರ ಕೊಡುಕೊಳೆಯೊಂದಿಗೆ ಬೆಳೆದವಾಗಿದ್ದಾವೆ. ಮರಾಠಿ ಮತ್ತು ಈ ನಾಡಿನಲ್ಲೇ ಹುಟ್ಟಿದ ಉರ್ದು ಈ ಭಾಷೆಗಳು ಕನ್ನಡದ ಬೆಳವಣಿಗೆಗೆ ತಮ್ಮದೇ ಕೊಡುಗೆಯನ್ನು ನೀಡಿವೆ, ಪಡೆದುಕೊಂಡಿವೆ. ಹಾಗೆಯೇ ಈ ಪ್ರದೇಶಗಳ ಅಭಿವೃದ್ಧಿಯಲ್ಲಿ ಅಕ್ಕಪಕ್ಕದ ರಾಷ್ಟ್ರೀಯತೆಗಳ ಜನರ ಕೊಡುಗೆ ಇದೆ. ಪರಸ್ಪರ ಸೌಹಾರ್ದದಿಂದ ಇದ್ದು ತಮ್ಮ ನಡುವಿನ ಸಮಸ್ಯೆಗಳನ್ನು ಮಾತುಕತೆಯ ಮೂಲಕ ಬಗೆಹರಿಸಿಕೊಂಡು ಅಭಿವೃದ್ಧಿಯ ಕಡೆ ಮುಖ ಮಾಡಬೇಕಿರುವುದು ಇಂದಿನ ಅಗತ್ಯವಾಗಿದೆ. ಅಖಿಲ ಭಾರತ ಮಟ್ಟದ ದೊಡ್ಡ ಬಂಡವಾಳಶಾಹಿಗಳ ಮತ್ತು ಸಾಮ್ರಾಜ್ರಶಾಹಿ ಶೋಷಿತರ ವಿರುದ್ಧದ ಹೋರಾಟದಲ್ಲಿ ಎಲ್ಲರೂ ಜೊತೆಗೂಡಿಯೇ ಸಾಗಬೇಕಿದೆ. ಕಾವೇರಿ, ಕೃಷ್ಣಾ ನದಿ ನೀರಿನ ವಿಚಾರದಲ್ಲಿ ಕರ್ನಾಟಕಕ್ಕಾಗಿರುವ ಚಾರಿತ್ರಿಕ ಅನ್ಯಾಯವನ್ನು ಸರಿಪಡಿಸಲೂ ಸಹ ಇದೇ ಧೋರಣೆಯಿಂದ ಮುಂದುವರೆಯಬೇಕು. ಹೆಲ್ಸಿಂಕಿ ನಿಯಮಗಳ ಆಧಾರದ ಮೇಲೆ ಮತ್ತು ಕರ್ನಾಟಕಕ್ಕೆ ವಸಹಾತುಶಾಹಿಗಳ ಕಾಲದಲ್ಲಿ ಆಗಿರುವ ಅನ್ಯಾಯವನ್ನು ದೃಷ್ಟಿಯಲ್ಲಿಟ್ಟುಕೊಂಡು, ಮಾತುಕತೆಯ ಮೂಲಕ ಬಗೆಹರಿಸಿಕೊಳ್ಳಲು ಒತ್ತು ನೀಡಬೇಕು.

ಭಾಷಾವಾರು ಪ್ರಾಂತ ವಿಂಗಡಣೆಯ ಸಂದರ್ಭದಿಂದ ಇರುವ ಗಡಿ ಸಮಸ್ಯೆಯನ್ನು ಬಿಡಿಸುವುದು ಅಷ್ಟು ಸರಳ ವಿಚಾರವಲ್ಲ. ಗ್ರಾಮಗಳನ್ನು ವಿಭಜನೆಯ ಘಟಕವನ್ನಾಗಿ ಪರಿಗಣಿಸುವುದು, ಭೌಗೋಳಿಕ ಸಾಮೀಪ್ಯ, ಜನರ ರಾಜಕೀಯ ಇಚ್ಛೆ ಮತ್ತು ಭಾಷಿಕರ ಸರಳ ಬಹುಮತದ ಆಧಾರ ಇವನ್ನು ಮಾನದಂಡಗಳನ್ನಾಗಿ ಇಟ್ಟುಕೊಂಡು ಗಡಿಸಮಸ್ಯೆಯನ್ನು ಬಗೆಹರಿಸಬೇಕೆಂಬ ನೀತಿಯು ವೈಜ್ಞಾನಿಕವಾದುದು. ಆದರೆ ೫೦ಕ್ಕೂ ಹೆಚ್ಚು ವರ್ಷಗಳು ಸಂದುಹೋಗಿರುವ ಸಂದರ್ಭದಲ್ಲಿ ಈ ವಿಷಯವು ಸೂಕ್ಷ್ಮವಾದುದಾಗಿದೆ. ಆದರೆ ಇದನ್ನು ಕೇವಲ ತಮ್ಮ ರಾಜಕೀಯ ಲಾಭಕ್ಕಾಗಿ ಬಳಸಿಕೊಳ್ಳುವ ಶಕ್ತಿಗಳನ್ನು ಹೊರಗಿಟ್ಟು, ಸರಿಯಾದ ಮಾನದಂಡಗಳನ್ನಿಟ್ಟುಕೊಂಡು ಬಗೆಹರಿಸಲು ಹೊರಟರೆ ಸಿಕ್ಕುಗಳು ಬಿಡಿಸಿಕೊಳ್ಳುತ್ತವೆ.

ಇಂದು ಶಿಕ್ಷಣವು ಮಾರುಕಟ್ಟೆಯಲ್ಲಿ ಬಿಕರಿಗಿರುವ ವಸ್ತುವಾಗಿದೆ. ಯಾವುದೇ ಹಿನ್ನೆಲೆಯಿಂದ ಬಂದವರಾದರೂ ಸರಿ ಅವರಿಗೆ ಅವರ ಆಸಕ್ತಿ ಮತ್ತು ಸಹಜ ಪ್ರತಿಭೆಗೆ ತಕ್ಕ ಅವಕಾಶವು ಲಭ್ಯವಾಗಬೇಕು. ಜಾತಿ/ವರ್ಗ/ಪ್ರದೇಶದ ಸವಲತ್ತುಗಳಿಂದ ಇಂದು ಅನುಸರಿಸಲಾಗುತ್ತಿರುವ ಪ್ರತಿಭೆ(ಮೆರಿಟ್)ಯ ಮಾನದಂಡಗಳನ್ನು ಕಿತ್ತೊಗೆಯಬೇಕು. ಅವೈಜ್ಞಾನಿಕ ಪರೀಕ್ಷಾ ಪದ್ಧತಿಗಳನ್ನು ಬದಲಾಯಿಸಬೇಕು. ವ್ಯಕ್ತಿಗಳ ಆಸಕ್ತಿ ಮತ್ತು ಸಮಾಜದ ಅಗತ್ಯಗಳಿಗನುಗುಣವಾಗಿ ಮಾನವಿಕ, ಮೂಲ ವಿಜ್ಞಾನದ ಅಧ್ಯಯನ ಹಾಗೂ ಸಂಶೋಧನೆಗಳಿಗೆ ಅವಕಾಶವಿರಬೇಕು. ಉದ್ಯೋಗವನ್ನು ನೀಡಲಾಗದೆ ವ್ಯಾಪಾರೀ ಹಿತಾಸಕ್ತಿಯ ಕಾರಣದಿಂದ ತೆರೆಯಲಾಗುತ್ತಿರುವ ಸಾವಿರಾರು ವೃತ್ತಿಪರ ಕಾಲೇಜುಗಳಿಗೆ ಬದಲಾಗಿ, ಪ್ರತಿಯೊಬ್ಬ ವಿದ್ಯಾವಂತ ಯುವಕ/ಯುವತಿಯರೂ ಉದ್ಯೋಗವನ್ನು ಪಡೆಯುವಂತೆ ಆಗಬೇಕು. ವೈಜ್ಞಾನಿಕವಾದ ಮತ್ತು ಪ್ರಜಾತಾಂತ್ರಿಕವಾದ

ಶಿಕ್ಷಣ ನೀತಿಯು ಜಾರಿಗೆ ಬರಬೇಕು.

ಇಡೀ ಜನಸಮುದಾಯದ ಆರೋಗ್ಯವು ಸರ್ಕಾರದ ಜವಾಬ್ದಾರಿಯಾಗಬೇಕು. ಇಂದು ಈಗಾಗಲೇ ಬಹುತೇಕ ದೇಶಗಳಲ್ಲಿ ಇಂತಹ ಪದ್ಧತಿಯು ಜಾರಿಯಲ್ಲಿದೆ. ಆದರೆ ನಮ್ಮಲ್ಲಿ ದಿನೇ ದಿನೇ ಖಾಸಗಿ ಕ್ಷೇತ್ರದ ಪಾಲು ಹೆಚ್ಚಾಗುತ್ತಿದೆ. ವೈದ್ಯಕೀಯ ಸೌಲಭ್ಯಗಳು ಜನರಿಗೆ ಕೈಗೆಟಕುವಂತೆ ವಿಕೇಂದ್ರೀಕರಣಗೊಳ್ಳಬೇಕು ಮತ್ತು ಸಮುದಾಯಮುಖಿಯಾಗಬೇಕು. ಇದಕ್ಕೆ ಸೂಕ್ತವಾದ ಆರೋಗ್ಯನೀತಿ ರೂಪುಗೊಳ್ಳಬೇಕು.

ನಗರಗಳಲ್ಲಿ ಹೆಚ್ಚುತ್ತಿರುವ ಜನದಟ್ಟಣೆ ಮತ್ತು ಟ್ರಾಫಿಕ್‌ನ ಸಮಸ್ಯೆಯ ಮೂಲ ನಮ್ಮ ಕೃಷಿ ಬಿಕ್ಕಟ್ಟಿನಲ್ಲಿ ಮತ್ತು ಕೈಗಾರಿಕಾ ಹಾಗೂ ಸೇವಾ ಕ್ಷೇತ್ರಗಳಲ್ಲಿನ ಬೆಳವಣಿಗೆಯು ನಗರಮುಖಿಯಾಗಿ ಕೆಲವೇ ಕೆಲವು ನಗರಗಳ ಸುತ್ತ ಕೇಂದ್ರೀಕರಣವಾಗುತ್ತಿರುವ ುದರಲ್ಲಿದೆ. ಇವನ್ನು ಬದಲಾಯಿಸದೆ, ಹೆಚ್ಚು ಹೆಚ್ಚು ಫ್ಲೈ ಓವರ್‌ಗಳು, ಮೆಟ್ರೋ-ಮಾನೋ ರೈಲುಗಳಿಂದ ಪರಿಸ್ಥಿತಿಯ ನಿಯಂತ್ರಣ ಮಾಡಲು ಹೋಗುತ್ತಿರುವುದು ಮತ್ತಷ್ಟು ಲೂಟಿಗೆ ದಾರಿ ಮಾಡಿಕೊಳ್ಳಲೆಂದೇ ಆಗಿದೆ. ಇವುಗಳ ಜೊತೆಗೆ ಮುಖ್ಯವಾಗಿ ಸೌಲಭ್ಯಗಳ ಅಸಮಾನ ಹಂಚಿಕೆಯ ಕಾರಣದಿಂದಲೇ ಸ್ಲಂಗಳು ಸೃಷ್ಟಿಯಾಗುತ್ತಿವೆ. ಸ್ಲಂರಹಿತ ನಗರಗಳೆಂದರೆ, ಸ್ಲಂ ಜನರನ್ನು ಎತ್ತಂಗಡಿ ಮಾಡುವುದೆಂದೇ ನಮ್ಮನ್ನು ಇಂದು ಆಳುತ್ತಿರುವವರು ತಿಳಿದಂತಿದೆ. ಸ್ಲಂ ಜನರಿಗೆ ಉದ್ಯೋಗ ಭದ್ರತೆಯೊಂದಿಗೆ, ಎಲ್ಲಾ ರೀತಿಯ ಮೂಲಭೂತ ಸೌಕರ್ಯಗಳುಳ್ಳ ವಸತಿ ವ್ಯವಸ್ಥೆ ಮಾಡುವುದು ಸರ್ಕಾರದ ಕರ್ತವ್ಯವಾಗಿದೆ. ಸ್ಲಂಗಳ ಸೃಷ್ಟಿಗೆ ಮೇಲ್ಕಾಣಿಸಿದ ಸರ್ಕಾರೀ ನೀತಿಗಳು ಕಾರಣವೇ ಹೊರತು ಅವುಗಳಲ್ಲಿ ಬಂದು ನೆಲೆಸುವ ಸಾಮಾನ್ಯ ಜನರಲ್ಲ.

ಜನರಿಗೆ ದೇವರು, ಧರ್ಮಗಳ ಕುರಿತು ತಮ್ಮದೇ ಆದ ನಂಬಿಕೆಗಳನ್ನು ಇಟ್ಟುಕೊಳ್ಳುವ, ಆಚರಿಸುವ ಅವಕಾಶ ಇರಬೇಕು. ಆದರೆ ಈ ವಿಚಾರಗಳಲ್ಲಿ ಇರುವ ಮೂಢ ನಂಬಿಕೆಗಳನ್ನು ವೈಜ್ಞಾನಿಕ ತಿಳುವಳಿಕೆಯ ಮೂಲಕ ಹೋಗಲಾಡಿಸಬೇಕು. ಒಂದು ಧರ್ಮದವರ ನಂಬಿಕೆ, ಆಚರಣೆಗಳು ಇನ್ನೊಬ್ಬರ ಬದುಕಿನಲ್ಲಿ ಪ್ರವೇಶಿಸಬಾರದು.

ಚುನಾವಣೆಗಳು ನಿಜವಾದ ಅರ್ಥದಲ್ಲಿ ಪ್ರಜಾತಾಂತ್ರಿಕವಾಗಿರಬೇಕು. ಒಮ್ಮೆ ಆಯ್ಕೆಯಾಗಿ ಹೋದವರನ್ನು ಸರಿಯಾಗಿ ಕೆಲಸಮಾಡದಿದ್ದಾಗ ಹಿಂದಕ್ಕೆ ಕರೆಸಿಕೊಳ್ಳುವ ಅವಕಾಶವಿರುವ ರೀತಿಯಲ್ಲಿ ರಾಜಕೀಯ ಬದಲಾವಣೆಗಳನ್ನು ತರಬೇಕು.

ವಿದೇಶೀ ಬಂಡವಾಳಶಾಹಿ ಶಕ್ತಿಗಳು ಇಂದು ಈ ದೇಶದ ಎಲ್ಲ ಆಗುಹೋಗುಗಳಲ್ಲೂ ತಲೆತೂರಿಸುತ್ತಿದ್ದಾರೆ. ವಿಶ್ವಬ್ಯಾಂಕ್, ಐಎಂಎಫ್, ಎಡಿಬಿ ಇತ್ಯಾದಿ ಅಂತರ್‍ರಾಷ್ಟ್ರೀಯ ಹಣಕಾಸು ಸಂಸ್ಥೆಗಳ ಮೂಲಕ ಸಾಲವನ್ನು ನೀಡಿ, ದೇಶದ ಆರ್ಥಿಕತೆಯನ್ನು ತಮ್ಮ ಅಗತ್ಯಕ್ಕೆ ತಕ್ಕಂತೆ ಪುನರ್‌ರೂಪಿಸುತ್ತಿದ್ದಾರೆ. ತಮ್ಮ ಹಿಡಿತವನ್ನು ಡಬ್ಲ್ಯುಟಿಓ ಒಪ್ಪಂದದ ಮೂಲಕ ಸಾಂಸ್ಥೀಕರಿಸಿಕೊಂಡಿದ್ದಾರೆ. ಭಾರತವು ಈ ಅಂತರ್‍ರಾಷ್ಟ್ರೀಯ ಲೂಟಿಕೋರ ಸಂಸ್ಥೆಗಳೊಂದಿಗಿರುವ ಒಪ್ಪಂದವನ್ನು ತಿರಸ್ಕರಿಸಿ, ಹೊರಬರದೆ ನಮ್ಮ ನಾಡಿನ ಸಾರ್ವಭೌಮತೆಯು ಉಳಿದುಕೊಳ್ಳಲು ಸಾಧ್ಯವಿಲ್ಲ.

(ಜನಪರ ವೇದಿಕೆಯ ಪ್ರಣಾಳಿಕೆಯಿಂದ)

* * *

ಪ್ರಕೃತಿ ಕುರಿತು
ಗಾಂಧೀ ಮತ್ತು ಟಾಗೋರ್

– ಗುರುದಯಾಳ ಮಲ್ಲಿಕ್

ಪ್ರಕೃತಿ ದೇವರ ಬರಹವೆಂದೊಬ್ಬರು ಹೇಳಿದ್ದಾರೆ. ಇದು ನಿಜ ಕೂಡ. ಅಲ್ಲದೆ, ಅದು ಮೊಟ್ಟಮೊದಲನೆಯ ಮತ್ತು ಪ್ರಾಥಮಿಕ ಬರಹವಾಗಿದೆ. ಅದನ್ನು ಮಾನವಕುಲ ಕಲೆ, ಭಾಷೆ ಮತ್ತು ಸಾಹಿತ್ಯ, ವಿಜ್ಞಾನ, ತತ್ವಜ್ಞಾನ ಮತ್ತು ಧರ್ಮ ಮುಂತಾದ ವಿವಿಧ ಬಗೆಯ ಮಾಧ್ಯಮಗಳ ಮೂಲಕ ಅನಾವರಣಗೊಳಿಸುವಂತೆ ಮಾನವ ಕುಲಕ್ಕೊಂದು ಕರೆಕೂಡ ಇದೆ. ಅದು ಹೌದಾದರೆ ಪ್ರಕೃತಿಯನ್ನು ಜ್ಞಾನದ ಪ್ರಾಥಮಿಕ ವಿಶ್ವಕೋಶವೆಂದು ಮಾನ್ಯ ಮಾಡಬಹುದು. ಆದರೆ ಅನೇಕ ಜನರು ದೇವರ ಈ ಬರಹವನ್ನು ಅಧ್ಯಯನ ಮಾಡುವುದಿಲ್ಲ. ಪ್ರಕೃತಿಯನ್ನು ಓದಿ ಅದನ್ನು ಗಮನದಲ್ಲಿರಿಸಿಕೊಂಡು ಆಂತರ್ಯದಲ್ಲಿ ಜೀರ್ಣಿಸಿಕೊಳ್ಳಬೇಕು. ಆದರೆ ನಾವು ತಾಯಿ ಪ್ರಕೃತಿಯ ಬಗ್ಗೆ ಬಹಳಷ್ಟು ಮಟ್ಟಿಗೆ ಉದಾಸೀನರಾಗಿರುತ್ತೇವೆ. ಟಾಗೋರರು ಹೇಳುವಂತೆ ತಾಯಿಯ ಅಂಗಳದಲ್ಲಿ ದಿನವಿಡಿ ಆಡುತ್ತಿದ್ದ ಮಕ್ಕಳು ತಾಯಿಯ ಬಳಿಗೆ ಹೋಗಿ ಅವಳ ಗಂಭೀರ ಮುಖವನ್ನು ನೋಡಲು ಸಹ ಸಮಯವಿಲ್ಲದ ಮಕ್ಕಳಂತಿದ್ದೇವೆ!

ಒಂದರ್ಥದಲ್ಲಿ ಪ್ರಕೃತಿಯು ನಮಗೆ ಜನ್ಮ ಕೊಟ್ಟ ತಾಯಿಯಷ್ಟೇ ಅಲ್ಲ, ವೈದ್ಯಳೂ ಆಗಿದ್ದಾಳೆ. ಅವಳ ನಿಯಮಗಳನ್ನು ನಾವು ಪಾಲಿಸಿದಲ್ಲಿ ಅವಳು ನಮ್ಮನ್ನು ಆರೋಗ್ಯವಾಗಿಡುವಳು. ಪ್ರಕೃತಿಯ ನಿಯಮಗಳ ಪಾಲನೆ, ತಿಳುವಳಿಕೆ ಮತ್ತು ಪಾಲಿಸುವಿಕೆ ಈ ಎಲ್ಲವೂ ಗಾಂಧೀ ಮತ್ತು ಟಾಗೋರರ ವಿಶೇಷ ಗುಣಗಳಾಗಿದ್ದವು. ಪ್ರಕೃತಿಯೊಂದಿಗೆ ನಡೆಯುವುದು ಅವರ ಕಾರ್ಯವೈಖರಿಯಾಗಿತ್ತು. ಅದೊಂದು ಶ್ರಮ ಮತ್ತು ಶಾಂತಿಯ ಸುಖಕರ ಸಮರಸತೆಯ ಜೋಡಣೆಯಾದ್ದರಿಂದ ಅವರೀರ್ವರ ಕೆಲಸ ಎಂದೂ ಏಕತಾನತೆಯ ತುಕ್ಕು ಹಿಡಿಯುವ ಕಷ್ಟವನ್ನು ಅನುಭವಿಸಿರಲಿಲ್ಲ. ಬದಲಿಗೆ, ಅದು ಸ್ವತಃ ಪ್ರಕೃತಿಯ ತಾನ ಮತ್ತು ಪುನಶ್ಚೈತನದ ಸುವಾಸನೆಯನ್ನು ಹೊಂದಿತ್ತು.

ಪ್ರಕೃತಿಯ ಶಾಂತಿಯುತ, ಆದರೆ, ಪರಿಣಾಮಕಾರಿ ಪ್ರಭಾವದಲ್ಲಿ ಮತ್ತು ಪ್ರೇರಣೆ ಹಾಗೂ ಸೂಚನೆಯಲ್ಲಿ ಗಾಂಧೀ ಮತ್ತು ಟಾಗೋರ್ ನಂಬಿಕೆ ಹೊಂದಿದ್ದರು. ಆದ್ದರಿಂದ ಅವರು ತಮ್ಮ ಆಶ್ರಮ ಅಥವಾ ಕರ್ಮಭೂಮಿಯನ್ನು ಪ್ರಕೃತಿಯ ಶಾಂತಿಯುತ ಪರಿಸರದಲ್ಲಿ ಹೊಂದಿದ್ದರು. ಅವರೀರ್ವರು ಸಾಮಾನ್ಯವಾಗಿ ಬಯಲಿನಲ್ಲಿ ಇರುವುದನ್ನು ಹೆಚ್ಚು ಮಾನ್ಯ ಮಾಡುತ್ತಿದ್ದರು. ಬಹು ಕುತೂಹಲದಿಂದ ನಕ್ಷತ್ರಚ್ಛಾದಿತ ಆಕಾಶವನ್ನು ನೋಡುವುದೇ ಅವರಿಗೆ ಪ್ರೇರಣೆಯ ಮೂಲವಾಗಿತ್ತು. ಆ ನೋಟವು ಅಸೀಮ ಸೌಂದರ್ಯ ಮತ್ತು ಮನಃಶಾಂತಿ ಮತ್ತು ಸುಂದರತೆಗಳ ಬುಗ್ಗೆಯಾದ ಈ ವಿಶ್ವದ ಸೃಷ್ಟಿಕರ್ತನನ್ನು ನಕ್ಷತ್ರ ತುಂಬಿದ ಆ ಆಕಾಶ ಅವರಿಗೆ ಜ್ಞಾಪಿಸುತ್ತಿತ್ತು.

ಏಕೆಂದರೆ ಮಾನವನ ಆಧ್ಯಾತ್ಮಿಕ ಯಾತ್ರೆ ಪ್ರಕೃತಿಯಿಂದ ಪ್ರಾರಂಭವಾಗಿ ಪ್ರಕೃತಿದೇವತೆ ಕಡೆಗೇ – ಅಂತರಂಗದಿಂದ ಬಹಿರಂಗದತ್ತವಲ್ಲವೆ? ಆಕಾಶದಲ್ಲಿ ಅಥವ ಸಾಗರದಲ್ಲಿ ಪ್ರತಿಫಲಿತವಾಗುವ ಪ್ರಕಾಶ ಎಂದೂ ಸಾಗರದ ಮೇಲಾಗಲೀ ಭೂಮಿಯ ಮೇಲಾಗಲೀ ಇದ್ದಿರಲಿಲ್ಲವಲ್ಲವೆ? ಆತ್ಮದ ಬೆಳಕನ್ನು ತಿಳಿಯುವುದಕ್ಕೋಸ್ಕರ ಪೂರ್ವಭಾವಿ ಸಿದ್ಧತೆಯನ್ನು ಮಾನವನು ಮೊದಲು ಬೆಳಸಿಕೊಂಡದ್ದೇ ಪ್ರಕೃತಿಯ ಸಂದರ್ಭದಲ್ಲಿ. ಏಕೆಂದರೆ ಪ್ರಕೃತಿ ಅಗಾಧವಾಗಿದೆ. ಮಾನವ ಎಷ್ಟೊಂದು ಚಿಕ್ಕವ. ಮಾನವ ನಿಜವಾಗಿಯೂ ಪ್ರಕೃತಿ ಮತ್ತು ಪ್ರಕೃತಿದೇವಿಯ ಸಂಗಮವೇ ಆಗಿದ್ದಾನೆ. ಆ ಪ್ರಕೃತಿ ದೇವತೆ ಅವನ ಆಂತರ್ಯದಲ್ಲಿಯ ದೇವತ್ವದ ರೂಪವೇ ಆಗಿದೆ.

* * *

ಪುಸ್ತಕ ಪರಿಚಯ

ಪುಸ್ತಕದ ಹೆಸರು : **ಝೆನ್**
ಲೇಖಕರ ಹೆಸರು : ಅರುಣ್, ಮೋಹನ್
ಪ್ರಕಾಶಕರು : ನುಡಿ ಪುಸ್ತಕ, ನಂ ೨೭, ೨೧ನೇ ಮುಖ್ಯ ರಸ್ತೆ
ಬಿಡಿಎ ಕಾಂಪ್ಲೆಕ್ಸ್ ಎದಿರು, ಬನಶಂಕರಿ ೩ನೇ ಹಂತ,
ಬೆಂಗಳೂರು – ೭೦

ಭಗವಾನ್ ಬುದ್ಧ ಮೂಲತಃ ಭಾರತದವನಾದರೂ ತನ್ನ ಮಾನವೀಯ ಮೌಲ್ಯಗಳ ವಿಚಾರಗಳ ಕಾರಣದಿಂದಾಗಿ ಅವನ ವಿಚಾರಗಳಿಗೆ ಭೌಗೋಳಿಕ ಎಲ್ಲೆ ಇಲ್ಲ. ಬುದ್ಧನ ವಿಚಾರದಿಂದ ಪ್ರಭಾವಿತರಾಗುತ್ತಿರುವರ ಸಂಖ್ಯೆ ಹೆಚ್ಚುತ್ತಲೇ ಇದೆ. ವಿಶ್ವದಲ್ಲಿ ಹಿಂಸೆ ಬೆಳೆದಷ್ಟೂ ಬುದ್ಧ ಜಗತ್ತಿಗೆ ಬೇಕಾಗುತ್ತಾನೆ. ಬುದ್ಧನ ವಿಚಾರದಿಂದ ಪ್ರಭಾವಿತನಾದವನು ಜಪಾನಿನ ಝೆನ್. ಅವನ ವಿಚಾರವನ್ನು ವಿಶ್ವಕ್ಕೆ ತಿಳಿಸಿದವರು ಡಿ.ಟಿ.ಸುಜುಕಿ. ಅವರ ಕೃತಿಯನ್ನು ಕನ್ನಡಿಗರಿಗೆ ಪರಿಚಯಿಸಿ ಕೊಟ್ಟಿದ್ದಾರೆ ಅರುಣ್ ಮತ್ತು ಮೋಹನ್. ಈ ಪುಸ್ತಕದಲ್ಲಿ ಝೆನ್ ಹೇಳಿದ ಕಥೆಗಳು ಮತ್ತು ತ್ರಿಪದಿಗಳಲ್ಲಿ ವಿಚಾರ ಪ್ರಚೋದಕ ಕವನಗಳಿವೆ. ಬದುಕಿನ ಬಗ್ಗೆ ಆಸಕ್ತರಿರುವವರೆಲ್ಲರೂ ಓದಬೇಕಾದ ಪುಸ್ತಕವಿದು.

ಪುಸ್ತಕದ ಹೆಸರು : **ಪಂಚತಂತ್ರ**
ಲೇಖಕರ ಹೆಸರು : ಕನ್ನಡ ಅನುವಾದ : ಉಷಾ ಅಥಣೀಕರ್
ಪ್ರಕಾಶಕರು : ಸಪ್ನ ಬುಕ್ ಹೌಸ್, ೩ನೇ ಮುಖ್ಯ ರಸ್ತೆ,
ಗಾಂಧೀ ನಗರ, ಬೆಂಗಳೂರು – ೫೬೦೦೦೯

ಪಂಚತಂತ್ರದಲ್ಲಿಯ ಕಥೆಗಳನ್ನು ಕುರಿತಾದ ಅನೇಕ ಪುಸ್ತಕಗಳು ಈಗಾಗಲೇ ಬಂದಿವೆ. ಬರುತ್ತಲೂ ಇವೆ. ಆದರೆ ಸಪ್ನ ಬುಕ್ ಹೌಸ್‌ನವರು ಪ್ರಕಟಿಸಿರುವ ಉಷಾ ಅಥಣೀಕರ್‌ರವರ ಪಂಚತಂತ್ರ ಕಥೆಗಳು ಹೆಚ್ಚು ಅರ್ಥಗ್ರಾಹ್ಯವೂ ಮತ್ತು ಆಕರ್ಷಕವಾಗಿಯೂ ಮೂಡಿ ಬಂದಿವೆ. ಮಕ್ಕಳು ಓದಿ ಅರ್ಥ ಮಾಡಿ ಕೊಳ್ಳಬಹುದಾದ ಸುಲಭ ಶೈಲಿಯಲ್ಲಿ ನಿರೂಪಣೆಗೊಂಡಿವೆ. ಭಾಷಾ ಶುದ್ಧಿಯೂ ಇದೆ.

ಶಿಕ್ಷಣ ಮಾಧ್ಯಮ ಮತ್ತು ಗಾಂಧೀಜಿ

– ಹ.ಕ.ರಾಜೇಗೌಡ

ಭಾರತಕ್ಕೆ ಸ್ವಾತಂತ್ರ್ಯ ಬಂದು ಅರವತ್ತನಾಲ್ಕು ವರ್ಷಗಳು ಸಂದಿವೆ. ಇಷ್ಟು ದೀರ್ಘಕಾಲದ ನಂತರವೂ ನಾವು ಹಲವಾರು ದಾಸ್ಯದ ಕುರುಹುಗಳಿಂದ ಪಾರಾಗಲಾರದೆ ಒದ್ದಾಡುತ್ತಿದ್ದೇವೆ. ಅಂತಹ ಸಮಸ್ಯೆಗಳಲ್ಲಿ ಪ್ರಮುಖವೂ, ಪ್ರಬಲವೂ ಆದುದು ಶಿಕ್ಷಣ ಮಾಧ್ಯಮದ ಸಮಸ್ಯೆ. ಇಂದಿಗೂ ನಮ್ಮ ಶಿಕ್ಷಣ ಪರಭಾಷಾ ಮಾಧ್ಯಮದಲ್ಲಿ ಇಂದಿಗೂ ನಡೆಯುತ್ತಿದೆ. ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟದಂತೆಯೆ ಇಂದು ಶಿಕ್ಷಣ ಮಾಧ್ಯಮವನ್ನು ಮಾತೃ ಭಾಷೆಗಳಿಗೆ ಪರಿವರ್ತಿಸಲು ಹೋರಾಟ ನಡೆಸಬೇಕೇನೊ ಎನ್ನುವ ಪರಿಸ್ಥಿತಿ ಇದೆ. ಸ್ವಾತಂತ್ರ್ಯ ಪೂರ್ವದಿಂದಲೂ ಗಾಂಧೀಜಿಯವರು "ನಾನು ಸರ್ವಾಧಿಕಾರಿಯಾಗಿದಿದ್ದರೆ ಈ ಕೂಡಲೆ ನಮ್ಮ ಹುಡುಗರಿಗೆ ಅವರವರ ಮಾತೃಭಾಷೆಯ ಮೂಲಕ ಶಿಕ್ಷಣ ಮಾಡಬೇಕೆಂದು ಆಜ್ಞಾಪಿಸುತ್ತಿದ್ದೆ. ನಾನು ಪಠ್ಯ ಪುಸ್ತಕಗಳಿಗಾಗಿಯೂ ಕಾಯುವವನಲ್ಲ. ಪರಿವರ್ತನೆಯಾದರೆ ಅವು ತಾನಾಗಿಯೇ ಬರುತ್ತವೆ" ಎಂದು ಹೇಳುತ್ತಾ ಬಂದರು. ಅವರು ಬದುಕಿರುವವರೆಗೆ ನಮ್ಮ ಶಿಕ್ಷಣವನ್ನು ಈ ಪರಭಾಷಾ ಮಾಧ್ಯಮದ ದಾಸ್ಯದಿಂದ ಪಾರುಮಾಡಲು ಹೋರಾಟ ನಡೆಸಿದರು. ಆದರಿಂದು ಗಾಂಧೀಜಿಯವರ ಆದರ್ಶದ ಹೆಸರಿನಿಂದ ಅಧಿಕಾರ ನಡೆಸುತ್ತಿರುವ ರಾಜಕೀಯ ನಾಯಕರು, ಶಿಕ್ಷಣ ತಜ್ಞರು, ಸರ್ಕಾರಗಳು ಈ ಬಗ್ಗೆ ಇನ್ನೂ ಮೇನಾಮೇಷ ಎಣಿಸುತ್ತಿದ್ದಾರೆ. ಈ ಗಾಂಧೀ ಶತಮಾನ ವರ್ಷದಲ್ಲಾದರೂ ನಾವು ಗಾಂಧೀಜಿಯವರಿಗೆ ಬಹಳ ಪ್ರಿಯವಾಗಿದ್ದ ಈ ಸಮಸ್ಯೆಗೆ ಒಂದು ಪರಿಹಾರ ಕಂಡುಕೊಂಡರೆ ಅವರ ಆತ್ಮಕ್ಕೂ ಶಾಂತಿ ದೊರೆತೀತು. ಪ್ರಾಂತೀಯ ಭಾಷೆಗಳಿಗೆ ಶಿಕ್ಷಣ ಮಾಧ್ಯಮ ಪರಿವರ್ತನೆಯಾದರೆ ಅನೇಕರು ತಿಳಿದಿರುವಂತೆ ಯಾವ ಅನಾಹುತವೂ ಆಗುವುದಿಲ್ಲ. ಅದರ ಬದಲು ನಮ್ಮ ಶಿಕ್ಷಣದ ಮಟ್ಟ ಏರುತ್ತದೆ. ಈ ಬಗ್ಗೆ ಗಾಂಧೀಜಿಯವರ ಬರಹ ಮತ್ತು ಹೇಳಿಕೆಗಳು ನಿಜಕ್ಕೂ ಮಾರ್ಗದರ್ಶಕವಾಗಿವೆ.

ಬ್ರಿಟಿಷರ ಆಡಳಿತದ ಅನುಕೂಲಕ್ಕಾಗಿ ಇಂಗ್ಲೀಷು ಶಿಕ್ಷಣಪದ್ಧತಿ ಭಾರತದಲ್ಲಿ ಅನುಷ್ಠಾನಕ್ಕೆ ಬಂದಿತೇ ವಿನಾ ಭಾರತೀಯರು ಜ್ಞಾನರ್ಜನೆಯಿಂದ ಉದ್ಧಾರವಾಗಲೆಂದಲ್ಲ. ಕಂಪನಿ ಸರ್ಕಾರಕ್ಕೆ ಬೇಕಾಗುವ ಗುಮಾಸ್ತರನ್ನು ತಯಾರು ಮಾಡುವುದಷ್ಟೇ ಈ ಶಿಕ್ಷಣಪದ್ಧತಿಯ ಗುರಿಯಾಗಿತ್ತು. ದೂರದ ಇಂಗ್ಲೆಂಡಿನಿಂದ ಉನ್ನತ ಅಧಿಕಾರಿಗಳನ್ನು ತರಬಹುದಿತ್ತೆ ವಿನಾ ಗುಮಾಸ್ತರು ಮತ್ತು ಕೆಲಸಗಾರರನ್ನಲ್ಲ. ಕೈಕೆಳಗಿನ ಕೆಲಗಳಿಗೆ ಬೇಕಾಗುವ ಒಂದು ಗುಲಾಮರ ತಂಡ ಅವರಿಗೆ ಬೇಕಾಗಿದ್ದುದು. ಆದುದರಿಂದಲೇ ಅವರು ಭಾರತೀಯರನ್ನು ಉದ್ಧಾರ ಮಾಡುವ ಸೋಗಿನಲ್ಲಿ ಇಂಗ್ಲೀಷ್ ಶಿಕ್ಷಣಪದ್ಧತಿಯನ್ನು ಜಾರಿಗೆ ತಂದರು. ಈ ಕಾರಣದಿಂದಲೇ ಈ ಇಂಗ್ಲೀಷು ಶಾಲೆಗಳಲ್ಲಿ ವ್ಯಾಸಂಗ ಮಾಡಿದ ರೈತಮಕ್ಕಳಿಗೆ ಹಿಂದಕ್ಕೆ ಬಂದಾಗ ಅವರಿಗೆ ಬೇಸಾಯದ ವಿಷಯ ಎಳ್ಳಷ್ಟೂ ಗೊತ್ತಿರಲಿಲ್ಲ. ತಮ್ಮ ಹಿರಿಯರ

ಉದ್ಯೋಗ-ವ್ಯವಸಾಯದ ಬಗ್ಗೆ ಅವರಿಗೆ ಪೂರಾ ಜಿಗುಪ್ಸೆ-ತಿರಸ್ಕಾರ. ಸರಕಾರಕ್ಕೆ ಬೇಕಾಗುವ ಗುಮಾಸ್ತೆಗಳ, ಕೆಲಸಗಾರರ ಸಂಖ್ಯೆಗೆ ಪರಿಮಿತಿಯಿತ್ತು ಎಂದ ಮೇಲೆ ಈ ವ್ಯವಹಾರದ ನೈಜಸ್ವರೂಪವನ್ನು ಮರೆಮಾಚಬೇಕಾಗಿಲ್ಲ. ಶಿಕ್ಷಣಪದ್ಧತಿಯಲ್ಲಿ ಸುಧಾರಣೆಗಳ ಮೇಲೆ ಸುಧಾರಣೆಗಳಾಗಿವೆ... ಸಮಿತಿಗಳು ವಿಶ್ವವಿದ್ಯಾನಿಲಯಗಳು ವಿಷಯವನ್ನು ಪರ್ಯಾಲೋಚಿಸಿವೆ. ಆದರೆ ಇವೆಲ್ಲವೂ ದೋಷಯುಕ್ತವಾಗಿವೆ. ಇದು ರಾಷ್ಟ್ರೀಯ ಜೀವನ ಅಭಿವೃದ್ಧಿಯ ತಳಹದಿಯನ್ನೇ ಧ್ವಂಸ ಮಾಡುತ್ತದೆ ಎಂದು ಅನೇಕರು ತಿಳಿದಿಲ್ಲ. ಆದುದರಿಂದಲೇ ಈ ಪದ್ಧತಿಯನ್ನು ಕಿತ್ತುಹಾಕಬೇಕು ಎಂದು ಗಾಂಧೀಜಿ ಸಾರಿದರು.

ನಮಗೆ ಇಂಗ್ಲಿಷು ಬೇಕೆ? ಬೇಕಾದರೆ ಎಷ್ಟು ಬೇಕು? ಎಂಬುದನ್ನು ನಾವು ಮೊದಲು ತೀರ್ಮಾನಿಸಿಕೊಳ್ಳಬೇಕು. ಕೋಟಿಗಟ್ಟಲೆ ಜನರಿಗೆ ಇಂಗ್ಲಿಷ್ ಕಲಿಸುವುದು ಅವರನ್ನು ಗುಲಾಮರನ್ನಾಗಿ ಮಾಡಿದಂತೆ. ಮೆಕಾಲೆ ಹಾಕಿದ ಶಿಕ್ಷಣದ ತಳಹದಿ ನಮ್ಮನ್ನು ಗುಲಾಮಗಿರಿಗೆ ನೂಕಿದೆ. ಇಲ್ಲಿ ಮತ್ತೊಂದು ಅಂಶವನ್ನು ಗಮನಿಸಬೇಕು. ಯೂರೋಪಿನಲ್ಲಿ ಕೈಬಿಟ್ಟ ಶಿಕ್ಷಣ ಪದ್ಧತಿಗಳು ನಮಗೆ ಶಿರೋಧಾರ್ಯ. ಇಂಗ್ಲಿಷ್ ಶಿಕ್ಷಣ ತಜ್ಞರು ಕಾಲಕ್ಕನುಗುಣವಾಗಿ ಶಿಕ್ಷಣ ಪದ್ಧತಿಯನ್ನು ಬದಲಿಸುತ್ತಾರೆ. ಅವರು ತಿರಸ್ಕರಿಸಿದ ಪದ್ಧತಿಯನ್ನು ನಾವು ತಬ್ಬಿಕೊಳ್ಳುತ್ತೇವೆ. ಪಾಶ್ಚಾತ್ಯ ದೇಶಗಳಲ್ಲಿ ಪ್ರತಿಯೊಂದು ಪ್ರದೇಶವೂ ಅಭಿವೃದ್ಧಿಯಾಗುವಂತೆ ಪ್ರಯತ್ನ ಮಾಡುತ್ತಾರೆ. ವೇಲ್ಸ್‌ನ ಮಕ್ಕಳಿಗೆ ತಮ್ಮ ತಾಯಿನುಡಿಯ ಮೂಲಕ ಶಿಕ್ಷಣ ಕೊಡಬೇಕೆಂದು ಚಳುವಳಿ ನಡೆಯಿತು. ಆರುನೂರು ವರ್ಷಗಳ ಗ್ರಹಣದ ನಂತರ ವೇಲ್ಸ್ ಭಾಷೆ ಮತ್ತೆ ತನ್ನ ಸ್ಥಾನವನ್ನು ಪಡೆದುಕೊಳ್ಳುತ್ತಿದೆ. ಇದರಿಂದ ಗ್ರೇಟ್ ಬ್ರಿಟನ್ನಿನ್ನ ಐಕ್ಯತೆಗೆ ಧಕ್ಕೆ ಬರುತ್ತದೆ ಎಂದು ಯಾರೂ ಹೇಳುತ್ತಿಲ್ಲ. ಅನೇಕ ಶತಮಾನಗಳ ನಂತರ ಗೇಲಿಕ್ ಭಾಷೆ ಮತ್ತೆ ಐರ್‌ನ ಆಡಳಿತ ಭಾಷೆಯಾಗಿದೆ. "ನಮ್ಮ ಸ್ಥಿತಿ ಹೇಗಿದೆ? ಒಬ್ಬರಿಗೊಬ್ಬರು ತಪ್ಪು ಇಂಗ್ಲಿಷ್‌ನಲ್ಲಿ ಕಾಗದ ಬರೆಯುತ್ತೇವೆ. ಇಂಗ್ಲಿಷ್‌ನಲ್ಲಿ ಎಂ.ಎ. ಮಾಡಿದವರೂ ಈ ತಪ್ಪು ಮಾಡುತ್ತಾರೆ. ಬಹುಕಾಲ ಹೀಗೆಯೇ ಮುಂದುವರಿದರೆ ಮುಂದಿನ ಪೀಳಿಗೆಯವರು ನಮ್ಮನ್ನು ಶಪಿಸಿಯಾರು" ಎಂದು ಗಾಂಧೀಜಿ ನಮ್ಮನ್ನು ಎಚ್ಚರಿಸಿದ್ದಾರೆ.

ಇಂಗ್ಲಿಷ್ ಶಿಕ್ಷಣ ಪಡೆದು ನಾವು ದೇಶವನ್ನು ಗುಲಾಮತನಕ್ಕೀಡು ಮಾಡಿದ್ದೇವೆನ್ನುವುದು ಗಮನಿಸಬೇಕಾದ ವಿಷಯ. ನಮ್ಮ ವಿದ್ಯಾರ್ಥಿಗಳಲ್ಲಿ ರಾಗ ದ್ವೇಷ ದೌರ್ಜನ್ಯಗಳು ಹೆಚ್ಚಿವೆ. ಇಂಗ್ಲಿಷ್ ಕಲಿತ ಭಾರತೀಯರು ಸಾಮಾನ್ಯ ಜನರನ್ನು ಮೋಸಗೊಳಿಸಲು, ಬೆದರಿಸಲು ಯತ್ನಿಸುತ್ತಾರೆ. ಸಾಮಾನ್ಯ ಪ್ರಜೆ ಸರ್ಕಾರಿ ಕಛೇರಿಗಳಿಗೆ ನ್ಯಾಯಾಲಯಗಳಿಗೆ ಹೋಗಿ ಅಲ್ಲಿ ನಡೆಯುವುದನ್ನು ತಿಳಿದುಕೊಳ್ಳಬೇಕಾದರೆ, ಇಂಗ್ಲಿಷ್ ತಿಳಿದಿರಲೇ ಬೇಕು. ಇಂಥ ಪರಿಸ್ಥಿತಿಯನ್ನು ಕಂಡು "ಇದಕ್ಕಿಂತ ಹೇಯವಾದ ಪ್ರಸಂಗವಿದೆಯೆ? ನ್ಯಾಯವಾದಿಯಾದವನೂ ತನ್ನ ಮಾತೃಭಾಷೆಯಲ್ಲಿ ವಾದಮಾಡುವುದಿಲ್ಲ. ಇದಕ್ಕಿಂತ ಮೂರ್ಖತನವುಂಟೆ? ಇದು ಗುಲಾಮಗಿರಿಯ ಹೆಗ್ಗುರುತಲ್ಲವೆ? ಇದಕ್ಕಾಗಿ ಇಂಗ್ಲಿಷನ್ನು ಬಯ್ಯಬೇಕೊ? ನಮ್ಮನ್ನೊ? ನಿಜವಾಗಿ ಇಂಗ್ಲಿಷ್ ಕಲಿತ ನಾವೆ ಭಾರತಕ್ಕೆ ಗುಲಾಮಗಿರಿಯ ಸಂಕೋಲೆ ತೊಡಿಸಿದವರು" ಎಂದು ಮರುಗಿದ್ದಾರೆ ಗಾಂಧೀಜಿ. ನಮ್ಮ ದುರದೃಷ್ಟ, ನಮ್ಮ ಶಿಕ್ಷಣಕ್ಕೂ ಪರಿಸ್ಥಿತಿಗೂ

ಸಂಬಂಧವೇ ಇಲ್ಲ. ಪ್ರಾರಂಭದಿಂದಲೇ ನಮ್ಮ ಹುಡುಗರು ಪಠ್ಯ ಪುಸ್ತಕಗಳಲ್ಲಿ ಓದುವುದು ನಮ್ಮ ಮನೆಯಲ್ಲಿ ನಿತ್ಯವೂ ಮಾಡಬೇಕಾದ ವಿಷಯಗಳಲ್ಲ, ತಮಗೆ ಸಂಬಂಧವೇ ಇಲ್ಲದ ಅಪರಿಚಿತ ವಿಷಯ. ಮನೆಯ ಬದುಕಿನಲ್ಲಿ ಯಾವುದು ಸರಿ ಯಾವುದು ತಪ್ಪು ಎಂಬುದನ್ನು ಹುಡುಗರು ಪಾಠದಿಂದ ಕಲಿಯರು. ತನ್ನ ನೆರೆಹೊರೆಯ ಬಗ್ಗೆ ಹೆಮ್ಮೆ ಪಡುವುದನ್ನೂ ಕಲಿಯರು. ವಿದ್ಯಾಭ್ಯಾಸದಲ್ಲಿ ಎಷ್ಟು ಮೇಲೇರಿದರೆ ಅಷ್ಟು ಮನೆಗೆ ಮನೆಯ ಬಾಳಿಗೆ ದೂರ. ಓದು ಮುಗಿಯುವ ವೇಳೆಗೆ ತನ್ನ ನೆರೆ ಹೊರೆಗೆ ಆತ ಅಪರಿಚಿತ. ಗೃಹ ಜೀವನದಲ್ಲಿ ಅವನಿಗೆ ರಸ ಕಾಣದು. ಹಳ್ಳಿಯ ದೃಶ್ಯಗಳು ಅವರಿಗೆ ತೀರಾ ಅನಾಗರಿಕವಾಗಿ ಕಾಣುತ್ತವೆ. ತಮ್ಮ ನಾಗರಿಕತೆ, ಸಂಸ್ಕೃತಿ ಕ್ರೂರ, ಅಶಕ್ತ, ಮೂಢ, ಅವ್ಯವಹಾರ್ಯ, ನಿಷ್ಪ್ರಯೋಜಕ ಎಂದು ಮಾತನಾಡುವುದನ್ನೂ ನಮ್ಮ ಹುಡುಗ ಹುಡುಗಿಯರಿಗೆ ಇಂಗ್ಲಿಷ್ ಪದ್ಧತಿಯ ಶಾಲೆಗಳಲ್ಲಿ ಕಲಿಸಲಾಗುತ್ತಿದೆ. ಒಟ್ಟಿನಲ್ಲಿ ಪರಂಪರಾನುಗತವಾದ ಅವನ ಸಂಸ್ಕೃತಿಯಿಂದ ಅಗಲಿಸುವುದೇ ಇಂಗ್ಲಿಷ್ ಶಿಕ್ಷಣದ ಏರ್ಪಾಡು. ಆದರೂ ಕೆಲವರು ಈ ಹೊರೆಯ ಮಧ್ಯದಲ್ಲಿಯೂ ಉತ್ತಮರಾಗಿದ್ದಾರೆ. ಅಂಥವರ ಬಗ್ಗೆ "ಇಂಗ್ಲಿಷ್ ಶಿಕ್ಷಣ ಪಡೆದ ತರುಣರಲ್ಲಿ ಅನೇಕರು ಅವರ ಬೆಳವಣಿಗೆಗೆ ವಿರುದ್ಧವಾದ ಶಿಕ್ಷಣ ಪಡೆದರೂ ಸತ್ವಶಾಲಿಗಳೂ ರಾಷ್ಟ್ರಾಭಿಮಾನಿಗಳೂ ಆಗಿದ್ದಾರೆಂಬುದು ನಮ್ಮ ಸಂಸ್ಕೃತಿ ಅವರ ಹೃದಯದಲ್ಲಿ ಆಳವಾಗಿ ಬೇರು ಬಿಟ್ಟಿರುವುದಕ್ಕೆ ಸಾಕ್ಷಿ. ನನ್ನ ಮಾತು ನಡೆಯುವ ಹಾಗಿದ್ದರೆ ಈಗಿನ ಪಠ್ಯಪುಸ್ತಕಗಳನ್ನೆಲ್ಲ ನಾಶಮಾಡಿ ನಮ್ಮ ಪರಿಸ್ಥಿತಿಗೆ ಹೊಂದುವಂಥ ಪುಸ್ತಕಗಳನ್ನು ಬರೆಸುತ್ತಿದ್ದೆ. ಹುಡುಗ ಶಿಕ್ಷಣ ಪಡೆಯುತ್ತಿದ್ದಂತೆಯೇ ಜೀವನದಲ್ಲಿ ಅದರ ಪ್ರಭಾವ ಕಂಡುಬರಬೇಕು" ಎಂಬುದು ಗಾಂಧೀಜಿಯವರ ಸ್ಪಷ್ಟ ಅಭಿಪ್ರಾಯ.

ಈಗ ಕೊಡುತ್ತಿರುವ ಇಂಗ್ಲಿಷ್ ವಿದ್ಯಾಭ್ಯಾಸ ಭಾರತೀಯರನ್ನು ನಿರ್ವೀರ್ಯರನ್ನಾಗಿ ಮಾಡಿದೆ. ನಮ್ಮ ವಿದ್ಯಾರ್ಥಿಗಳ ಶಕ್ತಿ ಸಾಮರ್ಥ್ಯಗಳಿಗೆ ಇಂಗ್ಲಿಷ್ ಶಿಕ್ಷಣ ಮಾಧ್ಯಮ ಒಂದು ದೊಡ್ಡ ಹೊರೆಯಾಗಿದೆ. ಏನು ಗ್ರಹಿಸಬೇಕು ಏನು ಬಿಡಬೇಕೆಂಬುದು ವಿದ್ಯಾರ್ಥಿಗಳಿಗೆ ತಿಳಿದಿರಬೇಕು. ಈ ವಿವೇಚನೆಯನ್ನು ಶಿಕ್ಷಣ ಕಲಿಸದೆ ಎಲ್ಲವನ್ನೂ ತುರುಕಿದರೆ ವಿದ್ಯಾರ್ಥಿ ಯಂತ್ರಗಳಿಗಿಂತ ಕಡೆಯಾಗುತ್ತಾನೆ. ವಿಚಾರ ಮಾಡುವ, ಅರಿತುಕೊಳ್ಳುವ ಜೀವಿ ಮನುಷ್ಯ. ಸತ್ಯಾಸತ್ಯಗಳ ಭೇದ ರುಚಿ ಅರುಚಿಗಳ ಭೇದ ವಿದ್ಯಾರ್ಥಿಗಳಿಗೆ ತಿಳಿಸಬೇಕು. ಆದರೆ ಇಂದಿನ ವಿದ್ಯಾರ್ಥಿ ಒಳ್ಳೆಯದು ಕೆಟ್ಟದರ ಅಂತರವನ್ನು ಅರಿತುಕೊಳ್ಳುವುದರಲ್ಲಿ ವಿಫಲನಾಗಿದ್ದಾನೆ. ಇದರ ಕಾರಣವನ್ನು "ಇಂದಿನ ವಿದ್ಯಾರ್ಥಿ ಉಸಿರು ಕಟ್ಟಿಸುವಷ್ಟು ಪುಸ್ತಕ ರಾಶಿಯ ಮಧ್ಯೆ ಸಿಕ್ಕಿಕೊಂಡು ಯಾವುದನ್ನೂ ಸರಿಯಾಗಿ ಅರ್ಥಮಾಡಿಕೊಳ್ಳಲಾರದೆ ಸಮಾಜ ಕಂಟಕನಾಗುತ್ತಿದ್ದಾನೆ. ಇದು ಇಂಗ್ಲಿಷ್ ಶಿಕ್ಷಣದ ಫಲ. ದೇಶ ಭಾಷೆಗಳನ್ನು ನಿರ್ನಾಮ ಮಾಡಿದುದು ಬ್ರಿಟಿಷರ ಸಂಪರ್ಕ. ಇತಿಹಾಸದಲ್ಲಿ ಇದು ಅತ್ಯಂತ ವಿಷಾದಕರ ಪ್ರಕರಣ. ಇಂಗ್ಲಿಷ್‌ನಲ್ಲಿ ಆಲೋಚನೆ ಮಾಡಿ ಇಂಗ್ಲಿಷ್‌ನಲ್ಲಿ ಹೇಳಬೇಕಾದುದು ಇಲ್ಲದಿದ್ದರೆ, ರಾಜಾರಾಮ ಮೋಹನ ರಾಯ್ ಇನ್ನೂ ದೊಡ್ಡವರಾಗುತ್ತಿದ್ದರು. ಲೋಕಮಾನ್ಯ ತಿಲಕರು ಇನ್ನೂ ದೊಡ್ಡ ವಿದ್ವಾಂಸರಾಗುತ್ತಿದ್ದರು. ತಮ್ಮ ಜನತೆಯ ಮೇಲೆ ಅವರು ಬೀರಿದ ಪ್ರಭಾವ ಅದ್ಭುತ. ಆದರೆ ಇಷ್ಟು ಅಸಹಜವಲ್ಲದ ವಾತಾವರಣದಲ್ಲಿ ಅವರು

ಬೆಳೆದು ಬಂದಿದ್ದರೆ ಆ ಪ್ರಭಾವ ಇನ್ನೂ ಪ್ರಬಲವಾಗುತ್ತಿತ್ತು. ಇಬ್ಬರೂ ಇಂಗ್ಲಿಷ್ ಸಾಹಿತ್ಯ ಭಂಡಾರದಿಂದ ಅಪಾರ ಲಾಭ ಪಡೆದರು ನಿಜ. ಆದರೆ ಇದು ಅವರಿಗೆ ತಮ್ಮ ಮಾತೃಭಾಷೆಗಳ ಮೂಲಕ ದೊರಕಬೇಕಾಗಿತ್ತು. ಇಂಗ್ಲಿಷ್ ಗೊತ್ತಿಲ್ಲದಿದ್ದರೆ ರಾಜಾ ರಾಮ ಮೋಹನರಾಯ್, ಲೋಕಮಾನ್ಯ ತಿಲಕರು ಈ ರೀತಿ ವಿಚಾರ ಮಾಡುತ್ತಿರಲಿಲ್ಲ ಎಂಬುದನ್ನು ನಾನು ನಂಬುವುದಿಲ್ಲ" ಎಂದು ಗಾಂಧೀಜಿ ಸಮರ್ಥ ಉದಾಹರಣೆಗಳೊಂದಿಗೆ ವಿವರಿಸಿದ್ದಾರೆ.

ಬರಿಯ ಅನುಕರಣಪಟುಗಳನ್ನು ಸೃಷ್ಟಿಸಿ ಯಾವ ದೇಶವೂ ಮಹಾರಾಷ್ಟ್ರವಾಗಲಾರದು. ಇಂಗ್ಲಿಷರಿಗೆ ಬೈಬಲ್ಲಿನ ಅಧಿಕೃತ ಬಾಷಾಂತರ ಇಲ್ಲದಿದ್ದರೆ ಅವರ ಸ್ಥಿತಿ ಏನಾಗುತ್ತಿತ್ತೊ? ಭಾರತದಲ್ಲಿರುವ ಅನೇಕ ಮೂಢನಂಬಿಕೆಗಳಲ್ಲಿ, ಇಂಗ್ಲಿಷ್ ಬಾರದಿದ್ದವನಿಗೆ ಹೊಸ ಹೊಸ ವಿಚಾರಗಳು, ವೈಜ್ಞಾನಿಕ ದೃಷ್ಟಿ ಇಲ್ಲ ಎಂಬುದು ಇಂಗ್ಲಿಷ್ ಆಳರಸರು ಭಾವಿಸಿದರು. ಭಾರತೀಯ ದೇಹ ಮನ ಆತ್ಮಗಳನ್ನು ಕ್ಷೀಣಗೊಳಿಸುವುದೇ ಅವರ ಉದ್ದೇಶವಾಗಿತ್ತು. ಇದನ್ನು ಐತಿಹಾಸ ಗಮನಿಸುತ್ತದೆ. "ಮಕ್ಕಳ ಮೇಲೆ ಇಂಗ್ಲಿಷನ್ನು ಹೇರುವುದು ಅವರ ಬೆಳವಣಿಗೆಯನ್ನು ಮೊಟಕಿಸಿ, ಬಹುಶಃ ಅವರ ಪ್ರಬುದ್ಧಿಯನ್ನು ಸಾಯಿಸಿದ ಹಾಗೆ. ಭಾಷೆಯನ್ನು ಕಲಿಸುವುದು ಎಂದರೆ, ಜ್ಞಾಪಕ ಶಕ್ತಿಯನ್ನು ಬೆಳೆಸುವುದು. ಮೊದಲಿಂದಲೇ ಇಂಗ್ಲಿಷನ್ನು ಕಲಿಯುವುದು ಮಗುವಿಗೆ ತಲೆಯ ಮೇಲೆ ಗುಡ್ಡವನ್ನು ಹೊರಿಸಿದ ಹಾಗೆ. ಅದನ್ನು ಕಲಿಯಲು ಹೋಗಿ ಮಾತೃಭಾಷೆಗೆ ಎಷ್ಟು ನಷ್ಟ! ಹಳ್ಳಿಯ ಮಗುವಿಗೆ ಹೇಗೋ, ಪಟ್ಟಣದ ಮಗುವಿಗೂ ಹಾಗೇ ಮಾತೃಭಾಷೆಯ ಗಟ್ಟಿ ತಳಹದಿ ಅಗತ್ಯ, ಅವರ ಬೆಳವಣಿಗೆಗೆ. ಈ ದೌರ್ಭಾಗ್ಯದತ್ತ ಭಾರತದಲ್ಲಿಯೇ ಈ ಮಾತನ್ನು ತರ್ಕಮಾಡಬೇಕಾಗಿ ಬಂದಿದೆ" ಎಂದು ಗಾಂಧೀಜಿ ನೊಂದುಕೊಂಡಿದ್ದಾರೆ.

ಗಾಂಧೀಜಿಯವರದು ಎಂದೂ ಸಂಕುಚಿತ ಮನಸ್ಸಲ್ಲ. ಅವರು ಪ್ರಪಂಚದ ಎಲ್ಲ ಧರ್ಮ, ಎಲ್ಲ ಜನಾಂಗ, ಎಲ್ಲ ಭಾಷೆಗಳನ್ನೂ ಗೌರವಿಸಿದ ಉದಾರ ಹೃದಯಿ. ಶಿಕ್ಷಣ ಮಕ್ಕಳಿಗೆ ಹೊರೆಯಾಗಬಾರದು, ರಾಷ್ಟ್ರಕ್ಕೆ ನಷ್ಟವಾಗಬಾರದೆಂಬುದು ಅವರ ಆಶಯ. ಉತ್ತಮವಾದುದನ್ನು ಯಾವಕಡೆಯಿಂದಲಾದರೂ ಸ್ವೀಕರಿಸುವುದು ಗಾಂಧೀಜಿಯವರ ಉದಾರ ಗುಣ. ಆದುದರಿಂದಲೇ "ನನ್ನ ಮನೆಗೆ ಸುತ್ತಲೂ ಗೋಡೆ ಕಟ್ಟಿ ಕಿಟಕಿಗಳನ್ನೆಲ್ಲ ಮುಚ್ಚಿಬಿಡಬೇಕೆಂಬುದು ನನ್ನ ಬಯಕೆಯಲ್ಲ. ಎಲ್ಲಾ ದೇಶಗಳ ಸಂಸ್ಕೃತಿಯ ಗಾಳಿಯೂ ನನ್ನ ಮನೆಯಲ್ಲಿ ನಿರಾತಂಕವಾಗಿ ಬೀಸಲಿ. ನಾನು ಮಾತ್ರ ಯಾವುದಕ್ಕೂ ಉರುಳಿ ಬೀಳುವುದಿಲ್ಲ. ಪರರ ಮನೆಯಲ್ಲಿ ತಿರುಪೆ ಎತ್ತಲೂ ಆರೆ, ಗುಲಾಮನಾಗಿರಲೂ ಆರೆ, ತಲೆಹೋಕನಾಗಿಯೂ ಇರಲಾರೆ. ಸುಳ್ಳು ಜಂಬಕ್ಕಾಗಿ ಸಲ್ಲದ ಬಡಾಯಿಗಾಗಿ ನನ್ನ ತಂಗಿಯರಿಗೆ ಇಂಗ್ಲಿಷ್ ಕಲಿಸುವ ಕಷ್ಟ ಕೊಡಲಾರೆ. ಸಾಹಿತ್ಯಾಭಿರುಚಿಯುಳ್ಳ ನಮ್ಮ ತರುಣ ತರುಣಿಯರು ಇಂಗ್ಲಿಷನ್ನು, ಇತರ ಭಾಷೆಗಳನ್ನು ಬೇಕಾದಷ್ಟು ಕಲಿಯಲಿ. ಜಗದೀಶ ಚಂದ್ರ ಬೋಸರಂತೆ, ಪ್ರಪುಲ್ಲಚಂದ್ರ ರಾಯರಂತೆ, ರವೀಂದ್ರನಾಥರಂತೆ ತಮ್ಮ ಪಾಂಡಿತ್ಯವನ್ನು ಜನರಿಗೆ ಕೊಡಲಿ. ಆದರೆ ಭಾರತೀಯರು ಯಾರೇ ಆಗಲಿ ಮಾತೃ ಭಾಷೆಯನ್ನು ಮರೆತರೆ, ಅಸಡ್ಡೆ ಮಾಡಿದರೆ, ಹೀನವೆಂದು ತಿಳಿದರೆ ನಾನು ಒಪ್ಪುವುದಿಲ್ಲ." ಎಂದು ಖಂಡಿತವಾಗಿ ಹೇಳಿದ್ದಾರೆ.

ನೀರಿನಂಥ ಇಂಗ್ಲಿಷನ್ನು ನೂರು ಜನಕ್ಕೆ ಕಲಿಸುವ ಬದಲು ಹಾಲಿನಂಥ ಇಂಗ್ಲಿಷನ್ನು ಹತ್ತು ಜನಕ್ಕೆ ಕಲಿಸುವುದು ಭಾಷೆಗೂ ರಾಷ್ಟ್ರಕ್ಕೂ ಒಳ್ಳೆಯದೆಂದು ನಂಬಿದವರು ಗಾಂಧೀಜಿ. ನಮ್ಮ ದೇಶದ ಇಂಗ್ಲಿಷ್ ಪದ್ಧತಿಯ ಶಾಲೆಗಳಲ್ಲಿ ಭಾರತೀಯ ಸಂಸ್ಕೃತಿ ಮತ್ತು ಭಾಷೆಗಳ ಬಗ್ಗೆ ಮಕ್ಕಳ ಮನಸ್ಸಿನಲ್ಲಿ ನಿರಭಿಮಾನ ಹುಟ್ಟಿಸಲಾಗುತ್ತಿದೆ. ಇಂಥ ಎಳೆಯ ವಯಸ್ಸಿನಲ್ಲಿ ಹುಟ್ಟುವ ಭಾವನೆಗಳು ಕಡೆಯ ವರೆಗೆ ಉಳಿದುಬಿಡುತ್ತವೆಂಬುದನ್ನು ಮರೆಯುವಂತಿಲ್ಲ. ಇಂಗ್ಲಿಷ್ ಕಲಿತವನು ಕಲಿಯದವರಿಗಿಂತ ಉತ್ತಮದರ್ಜೆಯೆಂಬ ಅಹಂಕಾರ ಮಕ್ಕಳನ್ನು ಅಧೋಗತಿಗೆಳೆಯುತ್ತದೆ. ಇಂಥ ಬಲಾತ್ಕಾರದ ಕಲಿಕೆಗೆ ಗಾಂಧೀಜಿ ಬದ್ಧ ವಿರೋಧಿ. "ವಿದ್ಯಾರ್ಥಿಗಳಿಗೆ ಸ್ವಾತಂತ್ರ್ಯವಿರಬೇಕು. ಅವರ ಬರೀ ಅನುಕರಣಶೀಲರಾಗಬಾರದು. ಆದರೂ ಸಂಪೂರ್ಣ ವಿಧೇಯರಾಗಿರಬೇಕು. ಎಷ್ಟೇ ಸದುದ್ದೇಶವಿದ್ದರೂ ಇಂಗ್ಲಿಷಿನ ವ್ಯಾಮೋಹಕ್ಕೊಳಗಾದ ಅಧ್ಯಾಪಕರಿಗೆ ಭಾರತೀಯ ಮಕ್ಕಳಿಗೇನು ಬೇಕು ಎಂಬುದು ಪೂರ್ಣವಾಗಿ ಅರ್ಥವಾಗಿಲ್ಲ. ಈಗ ಶಾಲೆಗಳಲ್ಲಿ ಕೊಡುವ ಓದು ಬರಹ ಗಣಿತ ವಿಜ್ಞಾನಗಳು ಮಕ್ಕಳಿಗೆ ಮುಂದೆ ಜೀವನದಲ್ಲಿ ಏನೂ ಪ್ರಯೋಜನವಾಗವು ಎಂಬುದನ್ನು ಎಲ್ಲರೂ ಒಪ್ಪಬೇಕು. ವಿದ್ಯಾಭ್ಯಾಸ ಮುಗಿದ ಒಂದು ವರ್ಷದೊಳಗೆ ಅದರಲ್ಲಿ ಹೆಚ್ಚು ಪಾಲು ಉಪಯೋಗವಿಲ್ಲದೆ ಮರೆತು ಹೋಗುತ್ತದೆ." ಆದುದರಿಂದ ಬಲತ್ಕಾರಕ್ಕೆ ವಿರೋಧವೇ ವಿನಾ ಭಾಷೆಗಲ್ಲ.

ಈ ಕಾರಣದಿಂದಲೇ ಶಿಕ್ಷಣ ಮಾತೃಭಾಷೆಗಳ ಮೂಲಕ ನಡೆಯಬೇಕೆಂಬುದು ಎಲ್ಲ ಶಿಕ್ಷಣತಜ್ಞರ ಮತ. ಗಾಂಧೀಜಿಯವರು ಈ ಬಗ್ಗೆ ಅಪಾರವಾಗಿ ಪ್ರಯೋಗ ನಡೆಸಿದವರು. ಕೆಲಸದೊಂದಿಗೆ ಕಲಿಕೆಯೆಂಬುದು ಗಾಂಧೀಜಿಯವರ ಸೂತ್ರ. ಭಾರತಕ್ಕೆ ಬೇಕಾದುದೂ ಅದೇ. ಅವರೇ ರಚಿಸಿ ಪ್ರಯೋಗಿಸಿ ಅನುಷ್ಠಾನಕ್ಕೆ ತಂದ ಮೂಲ ಶಿಕ್ಷಣ ಪದ್ಧತಿ ಅವರೊಂದಿಗೇ ನಶಿಸಿ ಹೋಯಿತು. ರಾಜಕೀಯ ಅನಿಶ್ಚಯ, ರಾಜಕಾರಣಿಯ ಚಂಚಲ ಪ್ರವೃತ್ತಿ, ಇಂಗ್ಲಿಷ್ ವ್ಯಾಮೋಹಗಳ ಪಿಸುಣತನದಿಂದಾಗಿ ಭಾರತ ಶಿಕ್ಷಣ ಮಾಧ್ಯಮವನ್ನು ಮಾತೃಭಾಷೆಗಳಿಗೆ ಪರಿವರ್ತಿಸಲು ಮೀನಾಮೇಷ ಎಣಿಸಲಾಗುತ್ತಿದೆ. ಈ ವಿಷಯದ ಬಗ್ಗೆ ರಾದ್ಧಾಂತವಾಗುವಷ್ಟು ಚರ್ಚೆ ನಡೆದಿದೆ. ಆದರೆ ಜನಶಕ್ತಿಯನ್ನು ಎದುರಿಸಿ ನಿಲ್ಲುವ ಶಕ್ತಿ ಇವರಿಗಿಲ್ಲದಿರುವ ಕಾರಣ ಪರಿವರ್ತನೆ ನಿಧಾನವಾಗಿ ಆಗಲಿ ಎಂದು ನುಣುಚಿಕೊಂಡು ಕಾಲಹರಣ ಮಾಡಲು ಯತ್ನಿಸುತ್ತಾರೆ. ಈ ಬಗ್ಗೆ ಗಾಂಧೀಜಿಯವರ ಅಭಿಪ್ರಾಯ ಹೀಗಿದೆ: "ಶಿಕ್ಷಣ ಮಾಧ್ಯಮವನ್ನು ಈ ಕ್ಷಣದಲ್ಲೇ ಬದಲಾಯಿಸಬೇಕು. ದೇಶಭಾಷೆಗಳಿಗೆ ಸರಿಯಾದ ಸ್ಥಾನಕೊಡಬೇಕು. ಉನ್ನತ ವಿದ್ಯೆ ಸ್ವಲ್ಪ ಗೊಂದಲವಾದರೂ ಪರವಾಗಿಲ್ಲ."

ಭಾರತೀಯ ಭಾಷೆಗಳು ಶಿಕ್ಷಣ ಮಾಧ್ಯಮವಾಗಲು ಸಾಕಷ್ಟು ಬೆಳೆಯಬೇಕೆಂಬುದು ಒಂದು ವಾದ. ಅನೇಕ ಭಾರತೀಯ ಭಾಷೆಗಳಿಗೆ ಸಾವಿರಾರು ವರ್ಷಗಳಷ್ಟು ಬೆಳವಣಿಗೆಯ ಚರಿತ್ರೆ ಇದ್ದು ಅವು ಸರ್ವತೋಮುಖವಾಗಿ ಅಭಿವೃದ್ಧಿ ಹೊಂದಿವೆ. ಭಾರತೀಯ ಪ್ರಾಂತ್ಯ ಭಾಷೆಗಳ ಬಗ್ಗೆ ಮಾತನಾಡುವವರೆಲ್ಲರೂ ಇಂಗ್ಲಿಷಿನ ಬೆಳವಣಿಗೆಯ ಅಳತೆಗೋಲನ್ನಿಟ್ಟುಕೊಂಡೆ ಮಾತಾಡುತ್ತಾರೆ. ಇಂಗ್ಲಿಷ್ ವಿಶ್ವದ ಭಾಷೆಯೆಂದು ಉಬ್ಬಿ ಹೇಳುವವರು ಆ ಭಾಷೆ ವಿಶ್ವವ್ಯಾಪಿಯಾಗಲು ಇಂಗ್ಲಿಷರ ಭಾಷಾಭಿಮಾನ ಕಾರಣ ಎಂಬುದನ್ನು ಮರೆಯಬಾರದು. ಬೈಬಲ್ಲನ್ನು ಪ್ರಪ್ರಥಮವಾಗಿ

ಇಂಗ್ಲಿಷಿಗೆ ಅನುವಾದ ಮಾಡಿದವನು ಜೀವಸಹಿತ ಅಗ್ನಿಗೆ ಆಹುತಿಯಾದ. ಇಂಗ್ಲಿಷರು ತಾವು ಹೋದಕಡೆಯಲ್ಲೆಲ್ಲ ತಮ್ಮ ಭಾಷೆಯನ್ನು ಬಿತ್ತಿದರು. ಎಲ್ಲಕ್ಕಿಂತ ಹೆಚ್ಚಾಗಿ ಇಂಗ್ಲಿಷ್ ಪ್ರಪಂಚದ ಎಲ್ಲ ಭಾಷೆಗಳಿಂದಲೂ ವಿಷಯ ಮತ್ತು ಪದಸಂಪತ್ತನ್ನು ಪಡೆದು ವೃದ್ಧಿಯಾಗಿದೆ. ಇಂಥ ಭಾಷಾ ಪ್ರೇಮ, ಸಾಹಸ ಪ್ರಿಯತೆ ಎಷ್ಟು ಜನ ಭಾರತೀಯರಿಗಿದೆ? ಭಾರತೀಯ ಭಾಷೆಗಳು ಬೆಳೆಯಲು ಗಾಂಧೀಜಿಯವರ ಸೂತ್ರ ಎಷ್ಟು ಸೂಕ್ತ!– "ಪ್ರಾಂತೀಯ ಭಾಷೆಗಳ ಬೆಲೆ ಹೆಚ್ಚಿಸಲು, ಅವುಗಳಿಗೆ ತಕ್ಕ ಸ್ಥಾನ ಕೊಡಲು, ಅವುಗಳನ್ನು ಶಿಕ್ಷಣ ಮಾಧ್ಯಮ, ಆಡಳಿತ– ನ್ಯಾಯಲಯಗಳ ಭಾಷೆಯಾಗಿ ಮಾಡಬೇಕು. ಶಾಸನ ಸಭೆಗಳ ಕಾರ್ಯಕಲಾಪಗಳು ಆಯಾ ಪ್ರಾಂತ್ಯ ಭಾಷೆಯಲ್ಲಿ ನಡೆಯಬೇಕು."

ಬೆಳವಣಿಗೆಯಲ್ಲಿ ದೋಷಗಳಿದ್ದೇ ಇರುತ್ತವೆ. ಪ್ರಪಂಚದ ಯಾವ ಭಾಷೆಯೂ ದೋಷಮುಕ್ತವಲ್ಲ. ಅದು ಬೆಳವಣಿಗೆಯ ಲಕ್ಷಣವೂ ಅಲ್ಲ. ಆದುದರಿಂದಲೇ "ತಾಯಿಯ ಎದೆಗೆ ಅವಚಿಕೊಳ್ಳುವಂತೆ ನಾನು ತಾಯಿನುಡಿಯನ್ನು ಗಟ್ಟಿಯಾಗಿ ಹಿಡಿದುಕೊಳ್ಳಬೇಕು. ಅದರಲ್ಲಿ ಎಷ್ಟೇ ಲೋಪದೋಷಗಳಿರಲಿ. ಅದೊಂದೇ ನನಗೆ ಅಮೃತದಾನ ಮಾಡಬಲ್ಲದು. ಹಾಗೆ ನೋಡಿದರೆ ಇಂಗ್ಲಿಷ್ ಭಾಷೆಯ ಬಗ್ಗೆ ನನಗೇನೂ ದ್ವೇಷವಿಲ್ಲ. ಆದರೆ ತನ್ನದಲ್ಲದ ಸ್ಥಾನವನ್ನು ಆಕ್ರಮಿಸಿದರೆ ನಾನದಕ್ಕೆ ಬದ್ಧ ವೈರಿ" ಎಂದಿದ್ದಾರೆ ಗಾಂಧೀಜಿ.

ಶಿಕ್ಷಣ ಮಾಧ್ಯಮದ ಪರಿವರ್ತನೆಯ ಹಾದಿಯಲ್ಲಿ ಅಡ್ಡ ಬರುವ ಮತ್ತೊಂದು ಸಮಸ್ಯೆ ಪಠ್ಯ ಪುಸ್ತಕಗಳ ಕೊರತೆ ಎಂದು ಕೆಲವರ ವಾದ. ಹಾಗೆ ನೋಡಿದರೆ ಇಂಗ್ಲಿಷ್‌ನಲ್ಲಿಯೂ ನಮ್ಮಲ್ಲಿ ಉತ್ತಮ ಪಠ್ಯ ಪುಸ್ತಕಗಳಿವೆಯೆ? ಇಲ್ಲಿಯೂ ಇಂಗ್ಲಿಷಿನವರು, ಪಾಶ್ಚಾತ್ಯರು ಬರೆದ ಪುಸ್ತಕಗಳಿಗೇ ಮೊರೆಹೋಗಬೇಕಾಗಿದೆ. ಆದುದರಿಂದ ನಮ್ಮಲ್ಲಿಲ್ಲದ ಪುಸ್ತಕಗಳನ್ನು ಭಾಷಾಂತರಿಸಿಕೊಳ್ಳಬಹುದು. ಅನೇಕ ಭಾರತೀಯ ವಿಶ್ವವಿದ್ಯಾನಿಲಯಗಳಲ್ಲಿ ಈಗಾಗಲೇ ಪ್ರಾಂತೀಯ ಭಾಷಾ ಪಠ್ಯ ಪುಸ್ತಕಗಳ ನಿರ್ಮಿತಿಯಲ್ಲಿ ದಾಖಲೆಗಳನ್ನೇ ಸ್ಥಾಪಿಸಿದ್ದಾರೆ. ಇಂಗ್ಲಿಷಿನಲ್ಲಿ ಕೂಡ ಅನೇಕ ಶಾಸ್ತ್ರಗ್ರಂಥಗಳು ಅನುವಾದ ಮೂಲಕ ಬಂದಿವೆ. ಜಪಾನ್, ರಷ್ಯಾ ಮುಂತಾದ ದೇಶಗಳಲ್ಲಿ ಪ್ರಪಂಚದ ಯಾವುದೇ ಭಾಷೆಯ ಉತ್ತಮ ವೈಜ್ಞಾನಿಕ ಗ್ರಂಥವನ್ನು ಅಲ್ಲಿನ ಭಾಷೆಗಳಿಗೆ ಒಂದು ತಿಂಗಳೊಳಗೆ ಅನುವಾದ ಮಾಡುವ ಏರ್ಪಾಡಿದೆಯಂತೆ ಅಲ್ಲದೆ "ಶಿಕ್ಷಣ ಮಾಧ್ಯಮವನ್ನು ಕ್ರಮೇಣ ಬದಲಾಯಿಸಬಾರದು. ಒಮ್ಮೆಲೆ ಬದಲಾಯಿಸಬೇಕು. ಆಗ ಪಠ್ಯ ಪುಸ್ತಕಗಳು ಉಪಾಧ್ಯಾಯರು ನಂಬಲಿಕ್ಕೂ ಆಗದಷ್ಟು ಸಮಯದಲ್ಲಿ ನಮಗೆ ಲಭಿಸುತ್ತವೆ. ಒಮ್ಮೆಲೆ ಕೋರ್ಟು ಕಛೇರಿಗಳಲ್ಲಿ ದೇಶ ಭಾಷೆಗಳನ್ನು ರೂಢಿಗೆ ತರಬೇಕು. ಈ ಸುಧಾರಣೆಯಲ್ಲಿ ನಮಗೆ ನಂಬಿಕೆ ಇದ್ದರೆ ಪಠ್ಯ ಪುಸ್ತಕಗಳನ್ನು ಒಂದು ಗಳಿಗೆಯಲ್ಲಿ ಮಾಡಿಬಿಡಬಹುದು" ಎಂಬ ಗಾಂಧೀಜಿಯವರ ಮಾತು ಗಮನಾರ್ಹ. ಜಪಾನ್ ರಷ್ಯಾಗಳಿಗೆ ಸಾಧ್ಯವಾದುದು ಭಾರತಕ್ಕೆ ಸಾಧ್ಯವಿಲ್ಲ ಎಂಬ ಮಾತು ನಂಬಲಾರದಂತಹದ್ದು.

ಪ್ರಾಂತೀಯ ಭಾಷೆಗಳಿಗೆ ಶಿಕ್ಷಣ ಪರಿವರ್ತನೆಯಾದರೆ ನಮ್ಮ ವೈಜ್ಞಾನಿಕ ಪ್ರಗತಿ ಕುಂಠಿತವಾಗುತ್ತದೆ ಎಂಬುದು ಅನೇಕರ ವಾದ. ಇದ ಈಜು ಬಂದ

ಹೊರತು ನೀರಿಗಿಳಿಯುವುದಿಲ್ಲ, ನೀರಿಗಿಳಿದ ಹೊರತು ಈಜ ಬರುವುದಿಲ್ಲ ಎಂಬ ಮತಿನಂತಿದೆ. ರಷ್ಯಾ, ಜಪಾನ್, ಸ್ವಿಸ್ ದೇಶಗಳು ತಮ್ಮ ತಮ್ಮ ಮಾತೃಭಾಷೆಯಲ್ಲಿ ಶಿಕ್ಷಣ ನೀಡಿ ವಿಜ್ಞಾನದಲ್ಲಿ ಮುಂದುವರಿದಿರುವುದರ ರಹಸ್ಯವೇನು? ನೊಬೆಲ್ ಪಾರಿತೋಷಕ ಪಡೆದ ಜಪಾನ್‌ನ ಪ್ರಾಧ್ಯಾಪಕರೊಬ್ಬರಿಗೆ ಇಂಗ್ಲಿಷ್ ಬಾರದು ಎಂಬ ವಿಷಯ ಗಮನಿಸಬೇಕು. ಇದಕ್ಕೂ ಬಹಳ ವಿಚಿತ್ರವಾಗಿ ಕೇಳಿಬರುತ್ತದೆ. ಪ್ರಪಂಚದ ಅನೇಕ ರಾಷ್ಟ್ರಗಳ ವೈಜ್ಞಾನಿಕ ತತ್ವಗಳು ಆಯಾ ದೇಶ ಭಾಷೆಗಳಲ್ಲಿ ತಯಾರಾಗಿವೆ. ನ್ಯೂಟನ್‌ನ ಭೂಮ್ಯಾಕರ್ಷಣ ತತ್ವ ಜರ್ಮನ್ ಭಾಷೆಯಲ್ಲಿದೆ ಎಂದರೆ, ಇಂಗ್ಲಿಷನ್ನು ಬಿಟ್ಟರೆ ವಿಜ್ಞಾನವಿಲ್ಲ ಎನ್ನುವವರಿಗೆ ಗಾಬರಿಯಾಗಬಹುದು. ಜಪಾನ್ ರಷ್ಯಾಗಳಿಗೆ ಸಾಧ್ಯವಾದ ಕೆಲಸ ಭಾರತೀಯರಿಗೆ ಸಾಧ್ಯವಿಲ್ಲ ಎನ್ನುವುದಾದರೆ ನಮ್ಮ ವಿಜ್ಞಾನಿಗಳಿಗೆ ವಿಜ್ಞಾನ ಸರಿಯಾಗಿ ತಿಳಿದಿಲ್ಲ ಎನ್ನಬೇಕಾಗುತ್ತದೆ. ಆದುದರಿಂದಲೇ ಗಾಂಧೀಜಿ "ರಷ್ಯಾ ಇಂಗ್ಲಿಷ್ ಇಲ್ಲದೆಯೇ ವೈಜ್ಞಾನಿಕ ಪ್ರಗತಿಯನ್ನು ಸಾಧಿಸಿದೆ. ಇಂಗ್ಲಿಷ್ ಇಲ್ಲದೆ ಸಾಧ್ಯವಿಲ್ಲ ಎಂಬುದು ನಮ್ಮ ಮಾನಸಿಕ ದಾಸ್ಯ. ಇಂಥಾ ಆಶಾಹೀನ ತತ್ವವನ್ನು ನಾನು ಎಂದಿಗೂ ಒಪ್ಪಲಾರೆ" ಎಂದಿದ್ದಾರೆ.

ಶಿಕ್ಷಣ ಮಾಧ್ಯಮದ ಬಗ್ಗೆ ಗಾಂಧೀಜಿಯವರದು ಸ್ಪಷ್ಟವಾದ ಅಭಿಪ್ರಾಯ. ಮಾತೃಭಾಷೆಗಳ ಮಹತ್ತನ್ನು ಅರಿತು ಅವರು ಹೇಳಿದ್ದಾರೆ. ಶಿಕ್ಷಣ ತಜ್ಞರು, ಆಧುನಿಕ ಮನಃಶಾಸ್ತ್ರ ಮಾತೃಭಾಷಾ ಶಿಕ್ಷಣವೇ ಸರ್ವೋತ್ತಮ ಎಂದು ಸಾರಿದೆ. ಆದ್ದರಿಂದ ತಾತ್ಕಾಲಿಕ ಅಡೆತಡೆಗಳಿದ್ದರೂ ಇದು ಆಗೇ ಆಗ ಬೇಕಾದ ಪರಿವರ್ತನೆ, ಆಗೇ ಆಗುತ್ತದೆ. ಏಕೆಂದರೆ "ತನ್ನ ಮಾತೃಭಾಷೆಯನ್ನು ಕುರಿತ ಅಭಿಮಾನ, ಅದರ ಅಭಿವೃದ್ಧಿಯ ತೀವ್ರ ಹಂಬಲ, ಅದರ ಸೌಂದರ್ಯದಲ್ಲಿ ಹರ್ಷ, ಅದರ ಬೆಳವಣಿಗೆಗಾಗಿ ಕಾರ್ಯ ತತ್ಪರತೆ ಪ್ರತಿಯೊಬ್ಬ ವಿದ್ಯಾವಂತನ ಕರ್ತವ್ಯಗಳು." ಎಷ್ಟೇ ಬಲಶಾಲಿಯಾದ, ಉಪಾಯ ಸಮರ್ಥವಾದ ಸರ್ಕಾರವಾಗಲಿ ಒಬ್ಬನ ಮಾತೃಭಾಷೆಯನ್ನು ಎಲ್ಲಿಯೂ ಕೂಡ ದುರ್ಬಲಗೊಳಿಸಲು ಸಾಧ್ಯವಾಗಿಲ್ಲ. ನಮ್ಮ ರಾಜಕಾರಣಿಗಳು ಭಾಷಾವಾದವೆಂದು ಕರೆಯುವ ಈ ಮಹತ್ತರ ಕ್ರಿಯೆ ಎಲ್ಲೆಲ್ಲಿಯೂ ಪ್ರೋತ್ಸಾಹಗೊಳ್ಳುತ್ತಿರುವುದನ್ನು ಎಲ್ಲರೂ ಕಾಣಬಹುದು. ಗತಕಾಲದ ನಿರಂಕುಶ ರಾಜ್ಯಗಳನ್ನು ಬಿಟ್ಟರೆ, ಭಾರತದ ಹೊರಗೆ ಯಾರೂ ಪ್ರಾಂತೀಯ ಭಾಷೆಗಳ ಬೆಳವಣಿಗೆ ಅಪಾಯಕಾರಿ ಎಂದು ಭಾವಿಸಲಿಲ್ಲ. ರಾಷ್ಟ್ರಪಿತನ ಜನ್ಮಶತಾಬ್ದಿಯ ವರ್ಷದಲ್ಲದರೂ ನಮ್ಮ ರಾಷ್ಟ್ರನಾಯಕರಿಗೆ ಜ್ಞಾನೋದಯವಾಗಿ ನಮ್ಮ ಶಿಕ್ಷಣ ಮಾಧ್ಯಮ ಸಂಪೂರ್ಣವಾಗಿ ಮಾತೃಭಾಷೆಗಳಿಗೆ ಪರಿವರ್ತನೆಯಾಗಿ ಗಾಂಧೀಜಿಯ ಆತ್ಮಕ್ಕೆ ಶಾಂತಿ ನೀಡುವಂತಾಗಲಿ.

(ಪ್ರಬುದ್ಧ ಕರ್ನಾಟಕದ ಗಾಂಧೀ ಸಂಚಿಕೆಯಿಂದ ಉದ್ಧೃತ)

* * *

ಗಾಂಧೀಜಿ ಒಡ್ಡಿದ ಅಗ್ನಿಪರೀಕ್ಷೆ

– ರಾವ್ ಬಹದ್ದೂರ

ಗಾಂಧೀಜಿಯವರು ತಮ್ಮ ಕೋಣೆಯಲ್ಲಿ ನೂಲುತ್ತ ಕುಳಿತಿದ್ದರು. ಜಾಜೂಜಿ ಅವರ ಎದುರಿಗೆ ಕುಳಿತಿದ್ದರು. ನಾನು ಬಾಗಿಲ ಹತ್ತಿರ ನಿಂತಿರುವುದನ್ನು ಕಂಡು ಒಳಗೆ ಬಾಯೆಂದು ಜಾಜೂಜಿ ಹೇಳಿದರು.

ಒಳಗೆ ಹೋಗಿ ನಿಂತುಕೊಳ್ಳಲು, ಕೂಡ್ರಲು ಹೇಳಿ ಗಾಂಧೀಜಿಯವರು ನನ್ನ ಮುಖದತ್ತ ತಮ್ಮ ದೃಷ್ಟಿ ಬೀರಿದರು.

"ನನ್ನ ಮುಂದೆ ಹೇಳಿದ ಸಂಗತಿಯನ್ನು ನಿನ್ನ ಬಾಯಿಂದ ಬಾಪೂಜಿ ಕೇಳಬಯಸಿದ್ದಾರೆ. ಎಲ್ಲವನ್ನು ಅವರ ಮುಂದೆ ಹೇಳು," ಎಂದು ಜಾಜೂಜಿ ಆಜ್ಞಾಪಿಸಿದರು.

ತಡವರಿಸುತ್ತಾ ಹರಕು ಮುರುಕು ಹಿಂದಿಯಲ್ಲಿ ಗಾಂಧೀಜಿಯ ಸಮ್ಮುಖದಲ್ಲಿ ನಡೆದುದ್ದನ್ನು ಹೇಳಿದೆ.

"ಈಗ ನೀನು ಹೇಳಿದ್ದೆಲ್ಲಾ ಸತ್ಯ ತಾನೆ?" – ಗಾಂಧೀಜಿಯವರ ಮುಖದಿಂದ ಪ್ರಶ್ನೆ ಬಾಣದಂತೆ ಬಂತು.

"ಸತ್ಯವನ್ನೇ ಹೇಳಿರುವೆ," ಎಂದು ಕಂಪಿಸುವ ಧ್ವನಿಯಲ್ಲಿ ಉತ್ತರ ಕೊಟ್ಟೆ.

"ಸರಿ. ನನ್ನ ಮುಂದೆ ಈಗ ಹೇಳಿದ್ದನ್ನೆಲ್ಲಾ ನೀನು ಪೋಲೀಸ್ ಕಚೇರಿಗೆ ಹೋಗಿ ಅಲ್ಲಿ ಆಫೀಸರರ ಮುಂದೆ ಹೇಳು," ಎಂದು ಗಾಂಧೀಜಿಯವರು ಹೇಳಿದಾಗ ನನ್ನ ಸರ್ವಾಂಗವೂ ಕಂಪಿಸಹತ್ತಿತ್ತು. ಕಣ್ಣೀರು ಧಾರೆಯಾಗಿ ಹರಿಯತೊಡಗಿತು. ಕರವಸ್ತ್ರದಿಂದ ಕಣ್ಣೀರು ಒರೆಸಲು ಮುಖ ಓರೆ ಮಾಡಿದೆ.

"ನನ್ನ ಮುಂದೆ ಹೇಳಿದ ಸತ್ಯವನ್ನೇ ಪೋಲೀಸ್ ಆಫೀಸರ್ ಮುಂದೆ ಹೇಳಲು ಅಂಜುವೆಯಾ?" ಎಂದು ನುಡಿದು ಜಾಜೂಜಿಯ ಕಡೆಗೆ ಹೊರಳಿ, "ಸತ್ಯವಂತರಿಂದ ಸಂಸ್ಥೆಯ ಘನತೆ ಗೌರವ ಹೆಚ್ಚುವುದು, ಮಾಡಿದ ಅಪರಾಧದ ಪುರಾವೆ ನಷ್ಟಪಡಿಸುವವರಿಂದ ಅಲ್ಲ. ಈ ಮಾತನ್ನು ಇವನಿಗೆ ತಿಳಿಸಿ ಹೇಳಿರಿ," ಎಂದು ಹೇಳಿದರು.

ತಾವು ತಪ್ಪಿತಸ್ಥರಂತೆ ಜಾಜೂಜಿಯವರು ಮೌನವಾಗಿದ್ದರು. ನಾನು ಉಸಿರಾಡಿಸುವ ಹೆಣದಂತೆ ಅಲ್ಲಿ ಕುಳಿತಿದ್ದೆ.

ಆ ಸ್ಥಿತಿಯಲ್ಲಿ ಕುಳಿತ ನನ್ನನ್ನು ನೋಡಿ ಜಾಜೂಜಿಯವರಿಗೆ ಕನಿಕರವೆನಿಸಿರಬೇಕು. ಅವರು ಎದ್ದು ಹೋಗಬಹುದೆಂದು ಸೂಚಿಸಿದರು. ಏಳಲು ನನ್ನ ಕೈಕಾಲುಗಳಲ್ಲಿ ತ್ರಾಣವೇ ಉಳಿದಿರಲಿಲ್ಲ. ಸವಾರಿಸಿಕೊಂಡು ಅಂತೂ ಹೇಗೊ ಕನಸಿನಲ್ಲಿ ಎದ್ದು ನಡೆದವನಂತೆ ಗಾಂಧೀಜಿಯ ಸಮ್ಮುಖದಿಂದ ಎದ್ದು ಹೊರಗೆ ಬಂದೆ.

ಹತ್ತಿಕ್ಕಿದ ದುಃಖದ ಕೋಡಿಯೊಡೆದಂತಾಯಿತು. ಏಕಾಂತದಲ್ಲಿ ಕುಳಿತು ಬಿಕ್ಕಿ ಬಿಕ್ಕಿ ಅಳುವ ಮನಸ್ಸಾಯಿತು. ಅದಕ್ಕೂ ವಿಧಿ ಅವಕಾಶಕೊಡಲಿಲ್ಲ.

ನನ್ನ ಹಿಂದಿನಿಂದಲೇ ಬಂದ ಜಾಜೂಜಿಯವರು, "ನಿನ್ನ ಮನಸ್ಥಿತಿಯನ್ನು ನಾನು ಅರ್ಥ ಮಾಡಿಕೊಳ್ಳಬಲ್ಲೆ. ನೀನು ಮಾಡಿದ್ದು ತಪ್ಪು. ಬಾಪೂಜಿಗೆ ಸತ್ಯವೇ ದೇವರು. ಸತ್ಯಕ್ಕೆ ಅಪಚಾರವಾಗುವಂತೆ ನಡೆಯುವುದು ದೇವರಿಗೆ ದ್ರೋಹ ಬಗೆದಂತೆ. ನೀನಿನ್ನು ಸಣ್ಣವ. ಗಾಬರಿಯಾಗಬೇಡ, ದುಃಖಿಸಬೇಡ. ನಾನಿರುವೆ ನಡೆ," ಎಂದು ಸಮಾಧಾನ ಹೇಳಿದರು. ಇದರಿಂದ ನನ್ನ ದುಃಖ ಕಡಿಮೆಯಾಗದೆ ಹೆಚ್ಚು ಉಲ್ಬಣವಾಯಿತು.

ಆಫೀಸಿಗೆ ಬಂದ ಕೂಡಲೇ, "ನೀನು ಈಗ ಊರಿಗೆ ಹೋಗಬಯಸುತ್ತಿದ್ದರೆ ರಜೆಗಾಗಿ ಅರ್ಜಿಕೊಡು; ರಜೆ ಮಂಜೂರು ಮಾಡುವೆ. ನಿನ್ನ ಈ ತಿಂಗಳ ಪಗಾರ ಇಂದೇ ಮುಂಗಡವೆಂದು ಪಡೆದು ಊರಿಗೆ ಹೋಗಬಹುದು," ಎಂದು ಹೇಳಿದರು.

"ಪೋಲೀಸ್ ಆಫೀಸರರ ಕಡೆಗೆ ಊರಿಂದ ಬಂದ ಮೇಲೆ ಹೋದರಾಯಿತೆನ್ನುವಿರಾ?" ಎಂದು ಅಂಜುತ್ತಲೇ ಕೇಳಿದೆ.

"ನೀನು ಅಳ್ಳದೆಯವನೆಂದು ಗುರುತಿಸಿದ್ದರಿಂದಲೇ ರಜೆ ಕೊಟ್ಟು ಸದ್ಯಕ್ಕೆ ಊರಿಗೆ ಹೋಗಲು ಅವಕಾಶ ಕೊಡಬೇಕೆಂದಿರುವೆ. ನೀನು ಬಂದ ಮೇಲೆ ಅವಶ್ಯ ಬಿದ್ದರೆ ಸತ್ಯ ಸಂಗತಿಯನ್ನು ಕೋರ್ಟಿನಲ್ಲಿ ಹೇಳುವಿಯಂತೆ," ಎಂದು ಹೇಳಿದ್ದು ಕೇಳಿ ಸಮಾಧಾನವೆನಿಸಿತು. ನಾನು ಸಕಾಲಕ್ಕೆ ನನ್ನ ಗಾಡಿ ಹಿಡಿಯುವನಂತೆ ಜಾಜೂಜಿ ನನ್ನನ್ನು ಬೀಳ್ಕೊಟ್ಟರು.

ಕೋರ್ಟಿನಲ್ಲಿ ಹಾಜರಾದ ಕಿರ್ದಿಯಲ್ಲಿ ಪಾಟೀಲನು ಹೇಳಿದಂತೆ ೨೦ ಸಾವಿರ ರೂಪಾಯಿ ಜಮೆ ಹಿಡಿದ ದಾಖಲೆಯೇ ಇರಲಿಲ್ಲ.

ಇನ್ನೂ ಖಟ್ಲೆ ನಡೆಯುತ್ತಿರುವಾಗಲೇ ಚುನಾವಣೆಗಳು ನಡೆದು ಪ್ರಾಂತದಲ್ಲಿ ಕಾಂಗ್ರೆಸ್ ಮಂತ್ರಿಮಂಡಲ ಅಧಿಕಾರಕ್ಕೆ ಬಂತು. ಸರಕಾರವು ಈ ಕೇಸನ್ನು ಹಿಂತೆಗೆದುಕೊಳ್ಳಲು ನಿರ್ಧರಿಸಿತು.

ಕೋರ್ಟಿನಲ್ಲಿ ಕೇಸು ವಿಚಾರಣೆಗೆ ಬಾರದ್ದರಿಂದ ನಾನು ಸಾಕ್ಷಿ ಹೇಳುವ ಪ್ರಸಂಗವೇ ಬರಲಿಲ್ಲ. ಹೀಗಾಗಿ ಗಾಂಧೀಜಿಯವರೊಡ್ಡಿದ್ದ ಅಗ್ನಿ ಪರೀಕ್ಷೆಯಿಂದ ನಾನು ಪಾರಾದೆ.

ಈ ಘಟನೆಯು ನೆನೆಪಿಗೆ ಬಂದಾಗ ಗಾಂಧಿಜಿಯವರೆಲ್ಲಿ, ಅವರ ಹೆಸರು ಹೇಳಿ ಅವರ ಜಯಘೋಷ ಮಾಡಿ ಗಾಂಧೀಭಕ್ತರೆಂದು ಹೇಳಿಕೊಳ್ಳುವ ನಾವೆಲ್ಲಿ? ಎಂದೆನಿಸುವುದು; ನಾಚಿಕೆಯಿಂದ ತಲೆ ತಗ್ಗಿಸುವಂತಾಗುವುದು.

* * *

ರೈತನ ಸಂಪಾದನೆಯ ಪ್ರತಿ ಕಣದಲ್ಲಿ ಸಾಕ್ಷಾತ್ ಲಕ್ಷ್ಮಿಯ ನಿವಾಸವಿದೆ

– ವಿನೋಬಾ

ಕೃಷಿಮಿತ್ ಕೃಷಸ್ವ

ಋಗ್ವೇದದ ಕೆಲ ಮಂತ್ರಗಳ ಆಧಾರದ ಮೇಲೆ ಮನುಷ್ಯನು ಕೃಷಿಯ ಶೋಧವನ್ನು ಮೊಟ್ಟ ಮೊದಲು ಭಾರತದಲ್ಲಿ ಮಾಡಿದ ಎಂಬ ನಿಷ್ಕರ್ಷಕ್ಕೆ ಬಂದಿದ್ದೇನೆ. ಈ ಶೋಧನೆಯ ಕಾರಣದಿಂದಾಗಿ ಮಾಂಸಾಹಾರದಿಂದ ಬಿಡುಗಡೆಯಾಗುವ ಧರ್ಮ ದೃಷ್ಟಿ ಗೋಚರವಾಯಿತು. ಆಗ ನಮ್ಮ ಪೂರ್ವಜ ಋಷಿಗಳು ಸಂತೋಷದಿಂದ ಕುಣಿಯಲಾರಂಭಿಸಿದರು. ಮತ್ತು "ಧನ್ಯ ಈ ಪುಣ್ಯಭೂಮಿ. ಇದು ನಮ್ಮನ್ನು ಹಿಂಸೆಯ ಅನಿವಾರ್ಯತೆಯಿಂದ ಬಿಡುಗಡೆಗೊಳಿಸಿತು" ಎಂದು ಅಂದರು. ವೇದಗಳಲ್ಲಿ ಮನುಷ್ಯ ಜೀವನವನ್ನು ಕೃಷಿ ಜೀವನವೆಂದೇ ಹೇಳಲಾಗಿದೆ. ವೇದವು ಪಂಚಕೃಷಿ ಸಮಾಜದ ಮಾತನಾಡುತ್ತದೆ. **ಪಂಚಕೃಷಿಃ** ಅಂದರೆ ಐದು ಬಗೆಯ ಕೃಷಿಕಾರರು. ಸಮಾಜದಲ್ಲಿ ಐದು ಬಗೆಯ ರೈತರಿದ್ದಾರೆ. ಬ್ರಾಹ್ಮಣ ರೈತ, ಕ್ಷತ್ರಿಯ ರೈತ, ವೈಷ್ಯ ರೈತ, ಶೂದ್ರ ರೈತ ಮತ್ತು ವನ್ಯ ಜಾತಿಯ ರೈತ. ಇದರ ಅರ್ಥ ಪ್ರತಿಯೊಬ್ಬನೂ ರೈತ. ಯಾರು ಊಟ ಬಯಸುತ್ತಾರೋ ಅಂಥವನ ಮೇಲೆ ಅನ್ನ ಉತ್ಪಾದನೆ ಮಾಡುವ ಹೊಣೆಗಾರಿಕೆಯಿದೆ. ಅನ್ನವನ್ನು ಉತ್ಪಾದಿಸುವುದು ಪ್ರತಿಯೊಬ್ಬನ ಧರ್ಮವೆಂದೂ ತಿಳಿಯಲಾಗುವುದು. ನಮ್ಮ ಸಮಾಜ ರಚನೆ, ಶಿಕ್ಷಣ ರಚನೆ ಪ್ರಕಾರ ಪ್ರತಿಯೊಂದು ವಿದ್ಯಾಲಯದೊಂದಿಗೆ ಎರಡು–ಮೂರು ಎಕರೆ ಭೂಮಿ ಹೊಂದಿಕೊಂಡಿರಲೇ ಬೇಕು. ನಗರದಲ್ಲಿ ವಿದ್ಯಾಲಯವಿದ್ದರೂ ಕೂಡ ಅದಕ್ಕೆ ಸಂಬಂಧಿಸಿದ ಭೂಮಿ ಇರಲೇಬೇಕು. ಮಕ್ಕಳು ಮತ್ತು ಶಿಕ್ಷಕರು ಸ್ವಲ್ಪ ಸಮಯ ಜೊತೆಗೂಡಿ ಹೊಲದಲ್ಲಿ ಕೆಲಸ ಮಾಡಬೇಕು. ಪ್ರಕೃತಿಯೊಂದಿಗೆ ಎಲ್ಲರ ಸಂಬಂಧ ಉಂಟಾಗುವುದು ಅವಶ್ಯಕ.

ಕೃಷ್ಣ ಶಬ್ದ ಕೂಡ ಕೃಷಿಯಿಂದ ಹುಟ್ಟಿದೆ. ಕೃಷ್ಣ ಶಬ್ದದಲ್ಲಿ ಕೃಷ್ ಧಾತುವಿದೆ. ಕೃಷ್ ಎಂದರೆ ವ್ಯವಸಾಯ ಮಾಡುವುದು. ಹಿಂದೂಸ್ತಾನದ ಹವಾಮಾನದಲ್ಲಿ ವ್ಯವಸಾಯ ಮಾಡುವವನ ಬಣ್ಣ ಕಪ್ಪಾಗುತ್ತದೆ. ಆದ್ದರಿಂದ ಕೃಷ್ಣ ಶಬ್ದದ ಅರ್ಥ ಕಪ್ಪು ಎಂದಾಯಿತು. ಆದರೆ, ಮೂಲಾರ್ಥ ವ್ಯವಸಾಯ ಮಾಡುವವನು.

ವ್ಯವಸಾಯ ಮಾಡುವವನ ಜೀವನ ಶುದ್ಧ, ಸ್ವಚ್ಛ, ನಿರ್ಮಲವಾಗಿರುತ್ತವೆ. ಕುರಲ್‌ನಲ್ಲಿ ಒಂದು ವಾಕ್ಯವಿದೆ. ನಿಜವಾಗಿಯೂ ಯಾರು ವ್ಯವಸಾಯದ ಮೂಲಕ ಜೀವಿಸುತ್ತಾರೋ ಅವರೇ ಜೀವಿಸುತ್ತಾರೆ. 'ಉಳುಂದು ವಾಳ್ವಾರೆ ವಾಳ್ವಾರ್' ಪ್ರಾಚೀನ ಕಾಲದ ಋಷಿಗಳಲ್ಲಿ ವ್ಯವಸಾಯದ ಬಗ್ಗೆ ಬಹಳ ಪ್ರೇಮವಿತ್ತು. ವೇದಗಳಂತೂ ವ್ಯವಸಾಯ ಮಾಡಬೇಕೆಂದು ಸ್ಪಷ್ಟ ಆಜ್ಞೆ ಕೊಟ್ಟಿದೆ. ಒಂದು ಸುಂದರ ವಚನವಿದೆ 'ಕೃಷಿ ವಿರುದ್ಧ ದ್ಯೂತ' ಎಂಬುದಾಗಿ ಕಲ್ಪನೆ ಮಾಡಲಾಗಿದೆ. ಕೃಷಿ ಪ್ರಾಮಾಣಿಕ ಪರಿಶ್ರಮದ ಉಪಲಕ್ಷಣ. ಇದಕ್ಕೆ ವಿಪರೀತವಾದುದು ದ್ಯೂತ. ಪರಿಶ್ರಮವನ್ನು ತಳ್ಳಿ ಹಣವನ್ನು ಸಂಪಾದಿಸುವ ಪಗಡೆಯಾಟದ ವೃತ್ತಿಯಾಗಿದೆ.

ಅಕ್ಷೈರ್ ಮಾ ದಿವ್ಯಃ ಕೃಷಿಮಿತ್ ಕೃಷಸ್ವ ವಿತ್ತೆ ರಮಸ್ವ ಬಹು ಮನ್ಯ ಮಾನಃ

ದಾಳಗಳಿಂದ ಆಟವಾಡಬೇಡ. ವ್ಯವಸಾಯ ಮಾಡು. ಅದರಿಂದ ದೊರೆಯುವ ಹಣ ಕಡಿಮೆಯಿದ್ದರು ಕೂಡ ಅದರಲ್ಲಿಯೇ ಸಂತೋಷ ಪಡು. ಅಕ್ಷದ ಅರ್ಥ ಪಣ. ವ್ಯವಸಾಯವನ್ನು ಬಿಟ್ಟು ಬೇರೆ ಸಾಧನಗಳಿಂದ ಹಣ ಸಂಪಾದನೆ ಮಾಡುವುದನ್ನು ವೇದ ಭಗವಾನ್‌ನು ಪಂದ್ಯವೆಂದು ತಿಳಿಯುತ್ತಾನೆ. ಇದು ಈ ಮಂತ್ರದ ಸ್ಥೂಲ ಅರ್ಥ. ವೈದಿಕ ಮಂತ್ರದ್ದು ಸ್ಥೂಲ ಮತ್ತು ಸೂಕ್ಷ್ಮವೆಂಬ ಎರಡು ಅರ್ಥಗಳಿವೆ. ಅಕ್ಷದ ಸೂಕ್ಷ್ಮ ಅರ್ಥ ಆಧ್ಯಾತ್ಮಿಕ. ಹೀಗೆ ಎರಡು ಅರ್ಥಗಳಾಗುತ್ತವೆ. ದಾಳದ ಸೂಕ್ಷ್ಮ ಅರ್ಥ ಇಂದ್ರಿಯ. ಕೃಷ್‌ದ ಅರ್ಥ ವ್ಯವಸಾಯ ಮಾಡುವುದು. ಅದೇ ರೀತಿ ತಪಸ್ಸು ಮಾಡುವುದು ಕೂಡ. ವಿದ್ ಅಂದರೆ ಜ್ಞಾನ ಪ್ರಾಪ್ತಿ ಮಾಡಿಕೊಳ್ಳುವುದು. ಅಂದರೆ ಈ ಮಂತ್ರದ ಸೂಕ್ಷ್ಮ ಅರ್ಥ ಹೀಗೆ–

ಇಂದ್ರಿಯಗಳೊಂದಿಗೆ ಆಟವಾಡಬೇಡ. ಇಂದ್ರಿಯಗಳ ನಿಗ್ರಹ ಮಾಡು. ಇದರಿಂದಾಗಿ ದೊರೆಯುವ ಜ್ಞಾನ ಅಲ್ಪವೇ ಇದ್ದರೂ ಕೂಡ ಅದರಲ್ಲಿಯೇ ಮಗ್ನನಾಗು. ಪುಸ್ತಕ ಓದಿ ಮತ್ತು ಕೇಳಿ ಪಡೆದ ಬಹು ಜ್ಞಾನಕ್ಕಿಂತ ಅದರ ಬೆಲೆ ಹೆಚ್ಚು.

ವ್ಯವಸಾಯದಂಥ ಯಾವುದೇ ಪ್ರಕಾರದ ಶಾರೀರಿಕ ಶ್ರಮವಿಲ್ಲದೆ ಬದುಕುವುದೆಂದರೆ ಇಂದ್ರಿಯಗಳ ಇಷ್ಟವನ್ನು ಪೂರ್ಣಮಾಡುವುದೇ ಆಗಿದೆ. ವ್ಯವಸಾಯದಲ್ಲಿ ಬಹಳಷ್ಟು ಶ್ರಮವಿರುತ್ತದೆ. ಆದ್ದರಿಂದ ಇಂದ್ರಯ ನಿಗ್ರಹ ಸಹಜವಾಗಿ ಆಗುತ್ತದೆ. ಈ ಮಾತು ಸಹಜ ಆದರೆ ಋಷಿಗಳು ವ್ಯವಸಾಯದ ಕೆಲಸದಲ್ಲಿ ಇನ್ನೊಂದು ಲಾಭವನ್ನು ನೋಡಿದ್ದಾರೆ. ಅದು ಇಂದ್ರಿಯ ನಿಗ್ರಹಕ್ಕಾಗಿ ಅನುಕೂಲವಿದೆ. ವ್ಯವಸಾಯದಲ್ಲಿ ಶ್ರಮ ಮಾಡಿ ಹಣದ ರಾಶಿಯನ್ನು ಸಂಪಾದಿಸುವುದು ಸಂಭವವಿಲ್ಲ. ಹೊಟ್ಟೆ ತುಂಬುವಷ್ಟು ಕೊಡು ಎಂದಷ್ಟೇ ಕೃಷಿ ದೇವತೆಯ ಬಳಿ ಕೇಳಬಹುದು. ಇದಕ್ಕಿಂತ ಹೆಚ್ಚು ಕೇಳಲು ಸಾಧ್ಯವೇ ಇಲ್ಲ. ಆದ್ದರಿಂದ ವ್ಯವಸಾಯವನ್ನು ಮಾಡುವುದರಿಂದ ಯಾವ ಅಲ್ಪ ಫಲ ಸಿಗುತ್ತದೊ ಅದರಲ್ಲಿಯೇ ಸಂತೋಷಪಡು ಎಂಬುದು ಋಷಿಗಳು ಹೇಳಿ ಕೊಟ್ಟಿರುವ ಪಾಠವಾಗಿದೆ. ಈ ದೃಷ್ಟಿಯಿಂದಲೂ ಕೂಡ ವ್ಯವಸಾಯವು ಇಂದ್ರಿಯ ನಿಗ್ರಹದ ಸಾಧನವಾಗಿದೆ. ಅಲ್ಲದೆ ವ್ಯವಸಾಯದಿಂದ ದೊರೆಯುವ ಅಲ್ಪ ಫಲವೂ ಕೂಡ ಬಹಳಷ್ಟಕ್ಕೆ ಸಮಾನವನೇ ಆಗಿದೆ. ಏಕೆಂದರೆ ಅದು ಅಲ್ಪವಾಗಿದ್ದರೂ ಕೂಡ ಹೊಸ ಹುಟ್ಟುವಳಿಯಾಗಿದೆ. ರೈತನ ಸಂಪಾದನೆಯ ಪ್ರತಿಯೊಂದು ಕಣದಲ್ಲಿ ಸಾಕ್ಷಾತ್ ಲಕ್ಷ್ಮಿಯ ನಿವಾಸವಿರುತ್ತದೆ. ಲಕ್ಷ್ಮಿ ಮತ್ತು ಹಣ ಇವರೆಡರ ಮಧ್ಯೆ ಅಂತರವಿದೆ. ಹಣ ಕಳ್ಳತನದಿಂದ, ಲೂಟಿಮಾಡುವುದರಿಂದ, ಜೂಜಾಡುವುದರಿಂದ, ಸುಳ್ಳು ಹೇಳುವುದರಿಂದ, ವಾಗ್‌ವೈಭವದಿಂದ ದೊರೆಯುತ್ತದೆ. ಲಾಠಿಯಿಂದ ದೊರೆಯುತ್ತದೆ, ಬಂದೂಕದಿಂದ ದೊರೆಯುತ್ತದೆ, ಜಗಳದಿಂದ ದೊರೆಯುತ್ತದೆ, ರಾಜನ ಮುದ್ರೆಯಿಂದ ದೊರೆಯುತ್ತದೆ, ಯಾತರಿಂದ ದೊರೆಯುವುದಿಲ್ಲ? ಆದರೆ ಲಕ್ಷ್ಮಿಯ ಒಂದೇ ಒಂದು ಕಣವನ್ನು ಪ್ರಾಪ್ತಮಾಡಿಕೊಳ್ಳುವ ಸಾಮರ್ಥ್ಯ ಯಾವುದೇ ಪಂಡಿತನ ವಾಗ್‌ವಿಲಾಸದಲ್ಲಿ ಇಲ್ಲ. ಯಾವುದೇ ಅಧಮ ವ್ಯಕ್ತಿಯ ಕೋಲಿನಲಿಲ್ಲ. ಅಥವಾ ಯಾವುದೇ ರಾಜರಾಜೇಶ್ವರನ ಮೊಹರಿನಲಿಲ್ಲ. ಲಕ್ಷ್ಮೀ ದೇವತೆಯಿಂದ ಯಾರಿಗೂ ಹಾನಿಯಾಗುವುದಿಲ್ಲ. ರಕ್ಷಣೆಯಾಗುತ್ತದೆ. ವ್ಯವಸಾಯದ ಕೆಲಸ ಉತ್ಪತ್ತಿ ಕೆಲಸ. ಇದೇ ಲಕ್ಷ್ಮಿ ವ್ಯವಸಾಯವೇ ಉತ್ತಮ ಮತ್ತು ಪ್ರಧಾನ ಕೆಲಸ.

ವ್ಯವಸಾಯದಲ್ಲಿಯೇ ಮಗ್ನನಾಗಿರು ಎಂಬುದು ವೈದಿಕ ಆದೇಶ. ವಿಷ್ಣುವಿನ ಅನುಗ್ರಹದ ಮಳೆಯಾದಾಗಲೇ ಲಕ್ಷ್ಮಿ ಪ್ರಕಟವಾಗುತ್ತಾಳೆ ಆದರೆ ರೈತನ ಪ್ರಯತ್ನದ ನೇಗಿಲು ನಡೆಯದೆ ವಿಷ್ಣುವಿನ ಅನುಗ್ರಹ ಆಗುವುದು ಕೂಡ ಸಂಭವವಿಲ್ಲ. ಶರೀರದಿಂದ ಬೆವರಿನ ಧಾರೆಗಳು ಹರಿದಾದ ನಂತರವೇ ಪರಜನ್ಯದ ಧಾರೆಗಳ ಪ್ರತೀಕ್ಷೆಯನ್ನು ಮಾಡಬೇಕು. ಗೀತೆಯಲ್ಲಿ ಯಜ್ಞಾತ್ ಭವತಿ ಪರಜನ್ಯಃ ಎಂಬುದರ ಅರ್ಥ ಇದೇ. ಆದ್ದರಿಂದ ಎಲ್ಲಿ ರೈತನ ಯಜ್ಞ ಮತ್ತು ವಿಷ್ಣು ಕೃಪೆಯ ಮಳೆಯಾಗುತ್ತದೋ ಅಲ್ಲಿಯೇ ಲಕ್ಷ್ಮಿಯ ನಿವಾಸವಾಗುವುದು.

ಸೃಷ್ಟಿಯಲ್ಲಿ ನಾವು ಒಂದು ಕಾಳನ್ನು ಬಿತ್ತಿದರೆ ಸಾವಿರಾರು ಕಾಳುಗಳು ದೊರೆಯುತ್ತವೆ. ಲಕ್ಷ್ಮಿಯ ಈ ಉತ್ಪಾದನೆಯೇ ಬ್ರಹ್ಮಕರ್ಮ. ವ್ಯವಸಾಯವು ಸಾಕ್ಷಾತ್ ಬ್ರಹ್ಮಕರ್ಮ. ಅರ್ಥ ಶಾಸ್ತ್ರಜ್ಞರು ಅದನ್ನು ಉತ್ಪಾದಕ ಕಾರ್ಯವೆಂದು ಕರೆಯುತ್ತಾರೆ. ಆದರೆ ಆ ಶಬ್ದ ಗೌಣ. ಬ್ರಹ್ಮ ಕರ್ಮವೆಂದರೆ ಬ್ರಹ್ಮದೇವನ ಕ್ರಿಯೆ. ಅದರಲ್ಲಿ ಸಾಕ್ಷಾತ್ ಸೃಷ್ಟಿ ದೇವತೆಯ ಸಂಬಂಧ ಬರುತ್ತದೆ. ಅದರಿಂದಾಗಿ ಎಲ್ಲ ಗುಣಗಳ ವಿಕಾಸವಾಗುವ ಅವಕಾಶ ದೊತೆಯುತ್ತದೆ. ಸೃಷ್ಟಿಯೊಂದಿಗೆ ಸಂಬಂಧ, ಪಶುಗಳೊಂದಿಗೆ ಏಕರೂಪತೆ, ಸಹಕಾರ್ಯದಲ್ಲಿ ಅವಶ್ಯಕತೆ, ಪರಿಶ್ರಮ ನಿಷ್ಠೆ, ಈ ಎಲ್ಲ ಪ್ರಕಾರದ ಲೆಕ್ಕವಿಡುವಿಕೆ ಇವೆಲ್ಲ ಸಂಗತಿಗಳು ಅದರಲ್ಲಿ ಸಾಧ್ಯವಾಗುತ್ತದೆ. ಅದರಲ್ಲಿ ಎಲ್ಲರ ಮನಸ್ಸು ಉದಾರವಾಗುತ್ತದೆ. ನಾನು ಗೋಧಿಯ ಒಂದು ಕಾಳನ್ನು ಬಿತ್ತಿದ್ದೆ ಅದರ ನೂರು ಕಾಳುಗಳನ್ನು ಮಾಡುವ ಕೆಲಸವನ್ನು ನಾನು ಮಾಡುವುದಿಲ್ಲ ಅದನ್ನು ಪರಮೇಶ್ವರ ಮಾಡುತ್ತಾನೆ, ಸೃಷ್ಟಿ ಮಾಡುತ್ತದೆ. ಮನುಷ್ಯ ನಿಮಿತ್ತ ಮಾತ್ರವಾಗುತ್ತಾನೆ. ಇದು ಮನುಷ್ಯ ಕೃತಿಯಲ್ಲ, ದೇವಕೃತಿ.

ಮನುಷ್ಯನಿಗೆ ಸಂಬಂಧಿಸಿದಂತೆ ಯಾವುದಾದರೂ ಅಪಾಯಕಾರಿ ವಿಷಯವಿದ್ದರೆ ಅದು ಅವನನ್ನು ಅವನ ಭೂಮಿಯಿಂದ ಉಚ್ಚಾಟಿಸುವುದಾಗಿದೆ. ಯಾವ ರೀತಿ ಪ್ರತಿಯೊಂದು ಮರದ ಬೇರು ಭೂಮಿಯಲ್ಲಿರುತ್ತದೋ ಅಂತೆಯೇ ಪ್ರತಿಯೊಬ್ಬ ಮನುಷ್ಯನ ಸಂಬಂಧ ಭೂಮಿಯೊಂದಿಗೆ ಇರಬೇಕು. ಭೂಮಿ ಸೇವೆ ಪೂರ್ಣ ಜೀವನದ ಅನಿವಾರ್ಯ ಅಂಗ. ವ್ಯವಸಾಯದಿಂದ ಸ್ವಚ್ಛಗಾಳಿ ಮತ್ತು ಸೂರ್ಯ ಪ್ರಕಾಶ ದೊರೆಯುತ್ತವೆ. ಅದರಿಂದ ಆರೋಗ್ಯ ಲಾಭವಾಗುತ್ತದೆ. ವ್ಯವಸಾಯದಿಂದ ಮಾನಸಿಕ ಆನಂದ ಪ್ರಾಪ್ತವಾಗುತ್ತದೆ, ಬುದ್ಧಿ ತೀವ್ರವಾಗುತ್ತದೆ. ವ್ಯವಸಾಯವು ಭಗವಂತನ ಭಕ್ತಿಯ ಸರ್ವಶ್ರೇಷ್ಠ ಸಾಧನವಾಗಿದೆ. ವ್ಯವಸಾಯ ಮೂಲಭೂತ ಸೇವೆಯಾಗಿದೆ. ಹೊಲ ಒಂದು ಸುಂದರ ಉಪಾಸನಾ ಮಂದಿರ, ಹೊಲ ಒಂದು ಉತ್ತಮ ವ್ಯಾಯಾಮ ಮಂದಿರ ಹಾಗೂ ಹೊಲ ಒಂದು ಉತ್ತಮ ಜ್ಞಾನ ಮಂದಿರ. ವ್ಯವಸಾಯದಲ್ಲಿ ಪರಮೇಶ್ವರನ ಸೇವೆಯ ಆನಂದ ದೊರೆಯುತ್ತದೆ. ಒಬ್ಬ ವ್ಯಕ್ತಿಯೇ ಆಗಲಿ ವ್ಯವಸಾಯದಿಂದ ಬೇರೆಯಾಗಿ ಉಳಿದರೆ ಅವನ ಜೀವನ ಅಪೂರ್ಣವಾಗಿ ಉಳಿಯುವುದು ಮತ್ತು ಅಷ್ಟು ಅಂಶದಲ್ಲಿ ಜೀವನದ ಆನಂದ ಕಡಿಮೆಯಾಗುವುದು. ಯಾವ ದೇಶ ಅಥವಾ ಸಮಾಜ ವ್ಯವಸಾಯದಿಂದ ದೂರಾಗುವುದೋ ಆ ದೇಶ ನಿಧಾನವಾಗಿ ಅಪಕರ್ಷ ಹೊಂದುವುದು, ಹ್ರಾಸವಾಗುವುದು. ಆದರ್ಶ ಸಮಾಜ ರಚನೆಯಲ್ಲಿ ಪ್ರತಿಯೊಬ್ಬ ಮನುಷ್ಯ ರೈತನಾಗುವನು ಪ್ರತಿಯೊಬ್ಬನದು ಪ್ರಕೃತಿಯೊಂದಿಗೆ ಸಂಪರ್ಕವಾಗುವುದು. ವ್ಯವಸಾಯದ ಕೆಲಸ ಮಾಡುವ ಹಕ್ಕು ಮತ್ತು ಕರ್ತವ್ಯ ಪ್ರತಿಯೊಬ್ಬನದಾಗಿದೆ.

* * *

ಜನಪದ ಸೇವಾ ಟ್ರಸ್ಟ್ ಸಮಾಚಾರ

ಹೊಸ ಜೀವನ ದಾರಿ ಕೇಂದ್ರದಲ್ಲಿ ಮಳೆನೀರನ್ನು ಸಂಗ್ರಹಿಸುವುದಕ್ಕಾಗಿ ಮತ್ತು ಅಲ್ಲಿಯ ಕೊಳವೆಬಾವಿಗೆ ಮಳೆಯ ನೀರು ಪೂರೈಕೆಗಾಗುವಂತೆ ವ್ಯವಸ್ಥೆ ಮಾಡಲಾಯಿತು.

ಕಥಾಕುಂಜ ಕಾರ್ಯಕ್ರಮ ನಡೆಯಿತು. ಕಥೆ ಕೇಳಲು ಸುಮಾರು ಅರವತ್ತು ಶಾಲಾ ಬಾಲಕ ಬಾಲಕಿಯರು ಬಂದಿದ್ದರು.

ಮೇಲುಕೋಟೆಯಲ್ಲಿರುವ ತಾಂತ್ರಿಕ ಕಾಲೇಜಿನಲ್ಲಿ ಟ್ರಸ್ಟಿನ ಅಧ್ಯಕ್ಷರು ಸರ್ ಎಂ. ವಿಶ್ವೇಶ್ವರಯ್ಯನವರ ಬಗ್ಗೆ ಉಪನ್ಯಾಸ ಕೊಟ್ಟರು.

ಮೈಸೂರಿನಲ್ಲಿರುವ ಸ್ನೇಹವೃಂದ ಸತ್ಸಂಗ ಬಳಗದ ಹತ್ತು ಜನ ಮಹಿಳಾ ಸದಸ್ಯರು ಟ್ರಸ್ಟಿಗೆ ಭೇಟಿಕೊಟ್ಟರು. ಟ್ರಸ್ಟಿನ ಕಾರ್ಯ ಚಟುವಟಿಕೆಗಳಾದ ಶಿಶುವಿಹಾರ, ಖಾದಿ ಸಿದ್ಧ ಉಡುಪು ತಯಾರಿಕಾ ಘಟಕ ಮತ್ತು ಖಾದಿ ಭಂಡಾರ ವೀಕ್ಷಿಸಿದರು. ಅಲ್ಲದೆ ಸದಸ್ಯಣಿಯರೆಲ್ಲ ಸೇರಿ ಹಲವಾರು ಭಜನ ಗೀತೆಗಳನ್ನು ಹೇಳಿದರು. ಶ್ರೀಮತಿಯರಾದ ಸಿ.ಹೇಮಲತಾ ಮತ್ತು ಶಕುಂತಲಾರವರು ನೇತೃತ್ವ ವಹಿಸಿದ್ದರು.

ಸ್ಥಳೀಯ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಶಾಖೆಯ ವ್ಯವಸ್ಥಾಪಕರಾದ ಶ್ರೀ ಕಾಮತ್‌ರವರು ಸಿದ್ಧ ಉಡುಪು ತಯಾರಿಕಾ ಘಟಕಕ್ಕೆ ಭೇಟಿಕೊಟ್ಟು ತಮ್ಮ ಸಂತೋಷ ವ್ಯಕ್ತಪಡಿಸಿದರು.

೨೦೦೯ ಸೆಪ್ಟಂಬರ್ ಮಾಹೆಯ ದಾನಿಗಳು

ಶ್ರೀ ನಾರಾಯಣ್; ಶ್ರೀ ಬಿ.ಟಿ.ನಂಜುಂಡಸ್ವಾಮಿ;
ಶ್ರೀಮತಿ ಜಯಂತಿ ರಾಜೀವಲೋಚನ – ಬೆಂಗಳೂರು
ಶ್ರೀ ಎಂ.ಎನ್.ವೆಂಕಟೇಶ – ಮಂಡ್ಯ
ಶ್ರೀ ರಮೇಶ್ ಕುಲಾಲ್ – ಮುಂಬೈ
ಸ್ನೇಹವೃಂದ – ಮೈಸೂರು
ಶ್ರೀ ಜಯತೀರ್ಥ ನಾಡಿಗೇರ್ – ಧಾರವಾಡ ಮತ್ತು
ಸಂಸ್ಥೆಯ ಎಲ್ಲಾ ಮಾಹೆಯಾನ ದಾನಿಗಳಿಗೆ ಟ್ರಸ್ಟ್ ತನ್ನ
ಕೃತಜ್ಞತೆಯನ್ನು ಸಮರ್ಪಿಸುತ್ತದೆ.

ಜನಪದ ನಿಲಯದ ಅಂತರಂಗದಲ್ಲಿ .. ೨೧

– ಸುರೇಂದ್ರ ಕೌಲಗಿ



೧೯೯೭ ಸ್ವಾತಂತ್ರ್ಯದ ಸುವರ್ಣ ಜಯಂತಿ. ಜಯಂತಿಯ ಅಂಗವಾಗಿ ದೇಶದಾದ್ಯಂತ ಗ್ರಾಮ ಸ್ವರಾಜ್ಯದ ವಿಚಾರವನ್ನು ಪ್ರಚುರಗೊಳಿಸಬೇಕೆಂದು ಸರ್ವ ಸೇವಾ ಸಂಘ ದೇಶದ ಸರ್ವೋದಯ ಕಾರ್ಯಕರ್ತರಿಗೆ ಕರೆ ಕೊಟ್ಟಿತು. ಸರ್ವ ಸೇವಾ ಸಂಘ ಸ್ವಾತಂತ್ರ್ಯಕ್ಕೆ ಮೊದಲು ಗಾಂಧೀಜಿ ಸ್ಥಾಪಸಿದ್ದ ಹದಿನೆಂಟು ಬಗೆಯ ರಚನಾತ್ಮಕ ಕಾರ್ಯ ಸಂಘಟನೆಗಳ ಒಕ್ಕೂಟ. ಗಾಂಧೀಜಿ ಜೀವಿಸುವವರೆಗೂ ಈ ಎಲ್ಲ ಸಂಸ್ಥೆಗಳಿಗೆ ಅವರ ಮಾರ್ಗದರ್ಶನ ದೊರೆಯುತ್ತಿತ್ತು. ಅವರು ಕಣ್ಮರೆಯಾದ ಮೇಲೆ ಜನವರಿ ೧೯೪೮ರಲ್ಲಿ ಸೇವಾಗ್ರಾಮ ಆಶ್ರಮದಲ್ಲಿ ಸಂತ ವಿನೋಬಾರ ಅಧ್ಯಕ್ಷತೆಯಲ್ಲಿ ರಚನಾತ್ಮಕ ಕಾರ್ಯಕರ್ತರ ಸಮ್ಮೇಳನ ನಡೆಯಿತು. ಆ ಸಮ್ಮೇಳನದಲ್ಲಿ ಅಖಿಲ ಭಾರತ ಸರ್ವ ಸೇವಾ ಸಂಘದ ಉದಯವಾಯಿತು. ಮುಂದಿನ ವರ್ಷಗಳಲ್ಲಿ ಅಖಿಲ ಭಾರತ ಎಂಬ ಶಬ್ದಗಳನ್ನು ತೆಗೆದುಹಾಕಿ ಸರ್ವ ಸೇವಾ ಸಂಘ ಎಂಬ ಹೆಸರಿನಲ್ಲಿ ಅದು ಇಂದಿಗೂ ಕ್ರಿಯಾಶೀಲವಾಗಿ ಕೆಲಸಮಾಡಿಕೊಂಡು ಬರುತ್ತಿದೆ. ಈ ಸರ್ವ ಸೇವಾ ಸಂಘ ಸ್ವಾತಂತ್ರ್ಯದ ಐವತ್ತನೇ ವರ್ಷವನ್ನು ಗಾಂಧೀಜಿ ಹೇಳಿದ್ದ ಗ್ರಾಮ ಸ್ವರಾಜ್ಯದ ವಿಚಾರವನ್ನು ಪ್ರಚಾರ ಮಾಡುವುದಕ್ಕಾಗಿ ಉಪಯೋಗಿಸಬೇಕೆಂಬ ಕರೆಯ ಮೇರೆಗೆ ಜನಪದ ಸೇವಾ ಟ್ರಸ್ಟಿನ ಕಾರ್ಯಕ್ಷೇತ್ರವಾದ ಪಾಂಡವಪುರ ತಾಲ್ಲೂಕಿನಲ್ಲಿ ಗ್ರಾಮ ಸ್ವರಾಜ್ಯ ಯಾತ್ರೆಯನ್ನು ಕೈಗೊಳ್ಳಲು ನಿಶ್ಚಯಿಸಲಾಯಿತು. ಈ ತಾಲ್ಲೂಕಿನಲ್ಲಿ ಸುಮಾರು ನಲ್ವತ್ತು ಗ್ರಾಮಗಳು ಇವೆ. ಈ ಗ್ರಾಮಗಳು ಮೂರು ಹೋಬಳಿಗಳಲ್ಲಿ ಹಂಚಿ ಹೋಗಿವೆ. ಈ ನಲ್ವತ್ತು ಹಳ್ಳಿಗಳಿಗೂ ಭೇಟಿ ಕೊಟ್ಟು ಅಲ್ಲಿ ಗ್ರಾಮ ಸ್ವರಾಜ್ಯದ ವಿಷಯವನ್ನು ತಿಳಿಸಬೇಕಂಬ ಉದ್ದೇಶ್ಯದಿಂದ ಒಂದು ತಿಂಗಳ ಪಾದಯಾತ್ರೆಯ ಕಾರ್ಯಕ್ರಮವನ್ನು ಹಾಕಿಕೊಳ್ಳಲಾಯಿತು. ಈ ಯಾತ್ರೆಯ ಪೂರ್ವ ಸಿದ್ಧತೆಗೆಂದು ಒಂದು ಸಭೆಯನ್ನು ಪಾಂಡವಪುರ ಟೌನಿನಲ್ಲಿರುವ ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದ ಸಭಾಭವನದಲ್ಲಿ ಕರೆಯಲಾಯಿತು. ಈ ಸಭೆಗೆ ಕಾಂಗ್ರೆಸ್ ಪಕ್ಷದ ಮುಖಂಡ ಮತ್ತು ಮಾಜಿ ಶಾಸಕರು ಆಗಿದ್ದ ಡಿ. ಹಲಗೇಗೌಡರು, ರೈತ ಸಂಘದ ನಾಯಕರಾದ ಕೆ.ಪುಟ್ಟಣ್ಣಯ್ಯ, ಡಿ.ಸಿ.ಸಿ. ಬ್ಯಾಂಕಿನ ಅಧ್ಯಕ್ಷರಾಗಿದ್ದ ಸಿ.ಅಣ್ಣೇಗೌಡ, ತಾಲ್ಲೂಕಿನ ಮುಖಂಡ ಸಿ.ಪುಟ್ಟರಾಜುರವರು ಹಾಗೂ ಇನ್ನೂ ಅನೇಕ ಆಸಕ್ತ ಸ್ನೇಹಿತರು ಸಭೆಯಲ್ಲಿ ಉಪಸ್ಥಿತರಿದ್ದರು. ಆ ಸಭೆಯಲ್ಲಿ ಯಾತ್ರೆಯ ದಿನಾಂಕಗಳನ್ನು ನಿಗದಿ ಪಡಿಸಲಾಯಿತು. ಶ್ರೀ ಪುಟ್ಟರಾಜುರವರ ಮನೆಯಲ್ಲಿ ಅವರ ಸಲಹೆಯಂತೆ ಯಾತ್ರೆಯ ಮಾರ್ಗ ಮತ್ತು ಯಾವ ಯಾವ ಹಳ್ಳಿಗಳಿಗೆ ಯಾತ್ರೆ ಹೋಗಬೇಕು ಹಾಗು

ಸಾರ್ವಜನಿಕ ಕಾರ್ಯಕ್ರಮವನ್ನು ನಡೆಸಬೇಕೆಂಬುದನ್ನು ನಿಶ್ಚಿತಗೊಳಿಸಲಾಯಿತು. ಆ ನಂತರ ಯಾತ್ರೆಯ ಉದ್ದೇಶವನ್ನು ತಿಳಿಸುವ ಮತ್ತು ಯಾತ್ರೆಯ ಮಾರ್ಗವನ್ನು ತಿಳಿಸುವ ಹಸ್ತಪತ್ರಿಕೆಗಳನ್ನು ಮುದ್ರಿಸಿ ಸಕಾಲಕ್ಕೆ ಸಂಬಂಧಿಸಿದ ವ್ಯಕ್ತಿಗಳಿಗೆ ಮತ್ತು ಗ್ರಾಮಗಳಿಗೆ ಪತ್ರಿಕೆಗಳನ್ನು ತಲುಪಿಸಲಾಯಿತು. ಯಾತ್ರೆಯು ೧೯೯೯ ಆಗಸ್ಟ್ ೧೫ರಂದು ಮೇಲುಕೋಟೆಯಿಂದ ಪ್ರಾರಂಭವಾಗತಕ್ಕದೆಂದು ತೀರ್ಮಾನಿಸಲಾಗಿತ್ತು. ಆ ಯಾತ್ರೆಯಲ್ಲಿ ಪ್ರಮುಖ ವ್ಯಕ್ತಿ ಟ್ರಸ್ಟಿನ ಅಧ್ಯಕ್ಷರೊಬ್ಬರೆ. ಇದಕ್ಕೆ ಹಲವಾರು ಕಾರಣಗಳಿದ್ದವು. ಮೊದಲನೆಯದಾಗಿ ಗ್ರಾಮಸ್ವರಾಜ್ಯ ವಿಷಯವಾಗಿ ವಿವರವಾಗಿ ಮಾತನಾಡುವವರ ಅಭಾವ; ಎರಡನೆಯದಾಗಿ ಒಂದು ತಿಂಗಳು ಕಾಲ ಸಮಯ ಕೊಡಲು ಸಾಧ್ಯವಿಲ್ಲದೇ ಇದ್ದುದು ಮತ್ತು ಮೂರನೆಯದಾಗಿ ಆಗಸ್ಟ್ ತಿಂಗಳು ಮಳೆಗಾಲದ ಸಮಯ, ಅದು ವ್ಯವಸಾಯದ ಸಮಯ. ಆಗ ಕರುಣಾಗೃಹದಲ್ಲಿ ವಿದ್ಯಾರ್ಥಿಯಾಗಿದ್ದ ಹನುಮಂತ ಎಂಬ ಹುಡುಗ ಮತ್ತು ಪುಟ್ಟವೀರೇಗೌಡ ಎಂಬ ಯುವಕ ನನ್ನ ಜೊತೆ ಬರಲು ಒಪ್ಪಿದರು. ಟ್ರಸ್ಟಿನಲ್ಲಿ ಒಂದು ಪುಟ್ಟ ಎತ್ತಿನಗಾಡಿಯಿದ್ದಿತು. ಅದನ್ನು ಎಳೆಯುವುದಕ್ಕೆ ಒಂದು ಗಿಡ್ಡ ಎತ್ತು ಸಾಕಾಗಿತ್ತು. ಆ ಗಾಡಿಯಲ್ಲಿ ಯಾತ್ರೆಗೆ ಬೇಕಾದ ಕೆಲ ಸಾಮಾನುಗಳು ಮತ್ತು ಮಾರಾಟಮಾಡಲು ಸರ್ವೋದಯ ಸಾಹಿತ್ಯದ ಕಟ್ಟು ಇತ್ಯಾದಿಗಳನ್ನಿಟ್ಟುಕೊಂಡು ಯಾತ್ರೆಯನ್ನು ಆಗಸ್ಟ್ ೧೫ ಬೆಳಿಗ್ಗೆ ೧೦ ಗಂಟೆಯ ಸಮಯದಲ್ಲಿ ಟ್ರಸ್ಟಿನ ಪ್ರಾರ್ಥನಾ ಮೈದಾನದಿಂದ ಪ್ರಾರಂಭಿಸಲಾಯಿತು. ಯಾತ್ರೆಯ ಪ್ರಾರಂಭದ ಮುನ್ನ ಒಂದು ಸಭೆಯನ್ನು ನಡೆಸಲಾಯಿತು. ಆ ಸಭೆಗೆ ಮೇಲುಕೋಟೆಯ ಕೆಲ ಆಸಕ್ತ ನಾಗರಿಕರು, ಸ್ಥಳೀಯ ಶಾಲಾ ಅಧ್ಯಾಪಕರು, ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಸೇರಿದ್ದರು. ಮುಖ್ಯವಾಗಿ ಅರೈಯರ್ ಶ್ರೀನಿವಾಸ ಅಯ್ಯಂಗಾರ್ ಇದ್ದರು. ಅರೈಯರ್‌ರವರು ಸಂತ ವಿನೋಬಾರ ಶಿಷ್ಯರು. ಅವರು ಮತ್ತು ಅವರ ಶಿಷ್ಯರಾದ ಕುಟ್ಟೀ ಇಬ್ಬರು ಜೊತೆ ಸೇರಿ ಕರ್ನಾಟಕವನ್ನೆಲ್ಲ ಪಾದಯಾತ್ರೆಯ ಮೂಲಕ ಸಂಚರಿಸಿ ಸರ್ವೋದಯ ವಿಚಾರವನ್ನು ಪ್ರಚಾರ ಮಾಡಿದಂಥವರು. ಅರೈಯರ್ ಸಭೆಯಲ್ಲಿ ಇದ್ದು ಪಾದಯಾತ್ರೆಯ ಮಹತ್ವ, ಯಾತ್ರೆಯಲ್ಲಿ ಬರಬಹುದಾದ ಕಷ್ಟಗಳು ಮತ್ತು ಗ್ರಾಮಸ್ವರಾಜ್ಯದ ಅಗತ್ಯ ಮುಂತಾದ ವಿಚಾರಗಳನ್ನು ತಮ್ಮ ಭಾಷಣದಲ್ಲಿ ಹೇಳಿದರು. ಅದೇ ಸಭೆಯಲ್ಲಿ ಶ್ರೀ ಯದುಶೈಲಾ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಶ್ರೀ ಕೆ.ಬಿ.ನರಸಿಂಹೇಗೌಡರು ಮತ್ತು ಯದುಶೈಲಾ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ವಿ.ವೆಂಕಟರಾಮೇಗೌಡರು ಕೂಡ ಯಾತ್ರೆಯ ಮಹತ್ವವನ್ನು ತಿಳಿಸುತ್ತ ಯಾತ್ರೆಯ ಯಶಸ್ಸಿಗೆ ಎಲ್ಲರೂ ಸಹಕರಿಸಬೇಕೆಂದು ತಿಳಿಸಿದರು. ಸಭೆಯ ನಂತರ ಯಾತ್ರೆಯನ್ನು ಪ್ರಾರಂಭಿಸಲಾಯಿತು. ಶಾಲಾ ಮಕ್ಕಳು ಸಾಲಾಗಿ ಮುಂದೆ ನಡೆದರು. ಯಾತ್ರೆಗಾಗಿ ಸಿದ್ಧಪಡಿಸಲಾಗಿದ್ದ ಘೋಷಣೆಗಳನ್ನು ಕೂಗುತ್ತ ಸಾಗಿದರು. ಗ್ರಾಮದ ಕೆಲ ಬೀದಿಗಳ ಮುಖಾಂತರ ಪೇಟೆ ಬೀದಿಯನ್ನು ತಲುಪಿ ನಂತರ ಯಾತ್ರೆ ಗ್ರಾಮದ ಬಸ್ ನಿಲ್ದಾಣ ತಲುಪಿತು. ಅಲ್ಲಿ ಎಲ್ಲರೂ ಸೇರಿ ಪುನಃ ಘೋಷಣೆಗಳನ್ನು ಕೂಗಿದರು. ನಂತರ ಪೂರ್ವ ನಿಗದಿತ ಕಾರ್ಯಕ್ರಮದಂತೆ ಯಾತ್ರೆಯು ಗ್ರಾಮಗಳ ಕಡೆಗೆ ಹೊರಟಿತು. ಮುಂದೆ ಒಂದು ತಿಂಗಳ ಕಾಲ ಯಾತ್ರೆ ಅಖಂಡವಾಗಿ ಯಾವ ತೊಂದರೆಯೂ ಇಲ್ಲದೆ ನಡೆಯಿತು. ಯಾತ್ರೆಯ ಬಗ್ಗೆ

ಸಾಕಷ್ಟು ಪ್ರಚಾರ ಇಲ್ಲದೇ ಇದ್ದುದರಿಂದ ಮತ್ತು ಪ್ರತಿಯೊಂದು ಗ್ರಾಮದಲ್ಲಿ ಪೂರ್ವ ಸಿದ್ಧತೆಯಿಲ್ಲದಿದ್ದುದರಿಂದ ನಿರೀಕ್ಷಿಸಿದಷ್ಟರ ಮಟ್ಟಿಗೆ ಸಭೆಗಳು ನಡೆಯಲಿಲ್ಲ. ಯಾತ್ರೆಯು ಸಾಮಾನ್ಯವಾಗಿ ಪ್ರತಿಯೊಂದು ಗ್ರಾಮಕ್ಕೂ ಸಂಜೆಯ ವೇಳೆ ತಲುಪುತ್ತಿದ್ದುದರಿಂದ ಗ್ರಾಮದ ಮುಖ್ಯಸ್ಥರನ್ನು ಸಂಪರ್ಕಿಸಿ ಸಭೆಯನ್ನು ಏರ್ಪಡಿಸಲಾಗುತ್ತಿತ್ತು. ಸಂಜೆಯ ವೇಳೆ ಕೆಲವರಾದರೂ ಸೇರಿ ವಿಚಾರಗಳನ್ನು ತಿಳಿಯುತ್ತಿದ್ದರು. ಯಾತ್ರೆಯು ನಡೆ-ಯುತ್ತಿದ್ದಾಗ ಒಮ್ಮೆ ಹಲಗೇಗೌಡರು, ಸೀತಾರಾಮ ಅಯ್ಯಂಗಾರ್‌ರವರು ಮತ್ತು ಇನ್ನು ಕೆಲವು ಸ್ನೇಹಿತರು ಬಂದು ಭೇಟಿ ಮಾಡಿ ಯಾತ್ರೆಯಲ್ಲಿ ಸ್ವಲ್ಪ ದೂರ ಭಾಗವಹಿಸಿದರು. ಕೆಲವು ಗ್ರಾಮಗಳಲ್ಲಿ ಯಾತ್ರೆ ತಲುಪಿದಾಗ ಶಾಲಾ ಅಧ್ಯಾಪಕರ ತಿಂಗಳ ಸಭೆ ನಡೆಯುತ್ತಿರುತ್ತಿತ್ತು. ಆ ಸಂದರ್ಭವನ್ನು ಉಪಯೋಗಿಸಿಕೊಂಡು ಗ್ರಾಮಸ್ವರಾಜ್ಯ ಮತ್ತು ಜೀವನ ಶಿಕ್ಷಣ ಮುಂತಾದ ವಿಚಾರಗಳನ್ನು ತಿಳಿಸಲಾಗುತ್ತಿತ್ತು. ಆಗ ಬಾಬುರಾವ್ ಮುಡುಬಿ ಎಂಬುವವರು ಜಿಲ್ಲಾಧಿಕಾರಿಯಾಗಿದ್ದರು. ಅವರಿಗೆ ಗಾಂಧೀಜಿಯವರ ವಿಚಾರದಲ್ಲಿ ಆಸಕ್ತಿಯಿತ್ತು. ಯಾತ್ರೆ ಮಾಣಿಕನಹಳ್ಳಿಯಲ್ಲಿದ್ದಾಗ ಅವರು ಬಂದು ಯಾತ್ರಿಕರನ್ನು ಭೇಟಿಮಾಡಿ ಹಲವಾರು ವಿಷಯಗಳನ್ನು ಚರ್ಚಿಸಿದರಲ್ಲದೆ, ಒಂದು ಗ್ರಾಮದಲ್ಲಿ ತಾಲ್ಲೂಕಿನ ಅಧಿಕಾರಿಗಳ ಸಭೆ ಏರ್ಪಡಿಸಿಕೊಟ್ಟು ಸಹಾಯ ಮಾಡಿದರು. ಚಿನಕುರಳಿ ಮತ್ತು ಕಟ್ಟೇರಿ ಗ್ರಾಮಗಳಲ್ಲಿ ಯಾತ್ರೆಗೆ ಭವ್ಯ ಸ್ವಾಗತವನ್ನು ನೀಡಲಾಯಿತು. ತ್ಯಾಗರಾಜುರವರ ಸಹಕಾರದಿಂದ ಒಳ್ಳೆಯ ಸಭೆಯ ಆಯೋಜನೆಯಾಗಿತ್ತು. ಚಿನಕುರಳಿ ಸಭೆಯಲ್ಲಿ ಮುಂದೆ ಜಿಲ್ಲಾಧಿಕಾರಿಯಾಗಿದ್ದ ಶ್ರೀ ಅತಿಕ್‌ರವರು ಸಾರ್ವಜನಿಕ ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಇದಕ್ಕೂ ಮುನ್ನ ಯಾತ್ರೆಯು ತಂಡೆಕೆರೆ ಎಂಬ ಗ್ರಾಮಕ್ಕೆ ಹೋದಾಗ ಅಲ್ಲಿಯೂ ಸಹ ಗ್ರಾಮಸ್ಥರು ಯಾತ್ರೆಯನ್ನು ಸಂಭ್ರಮದಿಂದ ಬರಮಾಡಿಕೊಂಡರಲ್ಲದೆ ಒಳ್ಳೆಯ ಸಭೆಯನ್ನು ಏರ್ಪಡಿಸಿಕೊಟ್ಟರು. ಇನ್ನು ಕೆಲವು ಗ್ರಾಮಗಳಲ್ಲಿ ಗ್ರಾಮಸ್ಥರು ಯಾತ್ರೆ ತಮ್ಮ ಗ್ರಾಮಕ್ಕೆ ಬಂದ ಅವಕಾಶವನ್ನು ಉಪಯೋಗಿಸಿಕೊಂಡು ಹಾಲು ಉತ್ಪಾದಕರ ಸಂಘಗಳಲ್ಲಿ ವಿಶೇಷ ಸಭೆ ಏರ್ಪಡಿಸುವುದು, ಶಾಲಾ ಮಕ್ಕಳಿಗೆ ಬಹುಮಾನ ಕೊಡಿಸುವುದು ಇತ್ಯಾದಿ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಿದ್ದರು.

ಯಾತ್ರೆಯು ಸರಿಸುಮಾರು ಇಡೀ ಪಾಂಡವಪುರ ತಾಲ್ಲೂಕಿನಲ್ಲಿ ನಡೆದದ್ದರಿಂದ ತಾಲ್ಲೂಕಿನಲ್ಲಿಯ ಸುಂದರವಾದ ಪ್ರಕೃತಿ ವೈವಿಧ್ಯ, ವಿಧವಿಧವಾದ ದೇವಸ್ಥಾನಗಳು, ಬಗೆಬಗೆಯ ವ್ಯವಸಾಯ ಜೀವನ, ಹಲವಾರು ಪ್ರಕಾರದ ಶಿಕ್ಷಣ ಸಂಸ್ಥೆಗಳು, ಭೌಗೋಳಿಕ ಸನ್ನಿವೇಶಗಳ ಪರಿಚಯವಾಯಿತಲ್ಲದೆ ಗ್ರಾಮ ಜೀವನದ ನಿಕಟ ಪರಿಚಯವಾಯಿತು. ಅನೇಕ ಹಳ್ಳಿಗಳಿಗೆ ಒಂದೇ ಒಂದು ದಿನಪತ್ರಿಕೆಯೂ ಬರುತ್ತಿಲ್ಲವೆಂದು ತಿಳಿದು ಆಘಾತವಾಯಿತು. ಇತ್ತೀಚೆಗಷ್ಟೆ ಹೋಬಳಿ ಮಟ್ಟದಲ್ಲಿ ಗ್ರಂಥಾಲಯ, ವಾಚನಾಲಯ ಪ್ರಾರಂಭವಾಗಿವೆ. ಯಾತ್ರೆ ನಡೆದದ್ದು ಹನ್ನೆರಡು ವರ್ಷಗಳ ಹಿಂದೆ. ಸ್ವಾತಂತ್ರ್ಯ ಬಂದು ಐವತ್ತು ವರ್ಷಗಳಾಗಿದ್ದರೂ, ಕೆಲವು ಪಂಚವಾರ್ಷಿಕ ಯೋಜನೆಗಳು ನಡೆದಿದ್ದರೂ ಗ್ರಾಮಗಳು ಆಗ ಆಧುನಿಕ ಅಭಿವೃದ್ಧಿಯ ಗಾಳಿಗೆ ಇನ್ನೂ ಒಳಪಟ್ಟಿರಲಿಲ್ಲ.

ಯಾತ್ರೆಯ ಫಲಶ್ರುತಿಯಾಗಿ ಎರಡು ಒಳ್ಳೆಯ ಬೆಳವಣಿಗೆಗಳಾದವು.

ಯಾತ್ರೆ ಪ್ರಾರಂಭವಾದ ಕೆಲ ದಿನಗಳ ನಂತರ ಮಹಾರಾಷ್ಟ್ರದ ಸರ್ವೋದಯ ಯುವಕ ಗಜಾನನ ಎಂಬುವವರು ಸೇರಿಕೊಂಡರು. ಇವರಿಗೆ ಕನ್ನಡ ಭಾಷೆ ಸ್ವಲ್ಪವೂ ಗೊತ್ತಿರಲಿಲ್ಲ. ಇವರು ಸಂತ ವಿನೋಬಾರ ವಿಚಾರದಿಂದ ಪ್ರಭಾವಿತರಾಗಿ ವರ್ಧಾದ ಬಳಿ ಕೆಲ ಸ್ನೇಹಿತರ ಬಳಗವನ್ನು ಮಾಡಿಕೊಂಡು ಸರ್ವೋದಯ ಕೆಲಸ ಮಾಡುತ್ತಿದ್ದರು. ಸಂಸ್ಕೃತವನ್ನು ಕಲಿಯ ಬೇಕೆಂದು ಮೇಲುಕೋಟೆಗೆ ಬಂದರು. ಆಗ ಅವರು ಸರ್ವೋದಯ ವಿಚಾರದ ಸಂಸ್ಥೆಯಾದ ಜನಪದ ಸೇವಾ ಟ್ರಸ್ಟ್ ಜೊತೆ ಸಂಪರ್ಕವನ್ನಿರಿಸಿಕೊಂಡರು. ಇದರ ಪರಿಣಾಮವಾಗಿಯೇ ಅವರು ಗ್ರಾಮ ಸ್ವರಾಜ್ಯ ಯಾತ್ರೆ ಸೇರಿಕೊಂಡರು. ಕೆಲವು ದಿನಗಳ ನಂತರ ಅವರು ಬೇರೆ ಕಡೆಗೆ ಹೋದರು. ಆದರೆ ಯಾತ್ರೆಯಲ್ಲಿ ಇದ್ದ ಸಮಯದಲ್ಲಿ ಅವರಿಗಾದ ಅನುಭವ ಮುಂದೆ ಅವರಿಗೆ ಬಹು ಉಪಯೋಗಕ್ಕೆ ಬಂತು. ಈಗ ಅವರು ಶ್ರೀರಂಗಪಟ್ಟಣದ ಬಳಿ ನೆಲಸಿ ವಿನೋಬಾರ ವಿಚಾರವನ್ನು ಪ್ರಚಾರ ಮಾಡುತ್ತಿದ್ದಾರೆ. ಕನ್ನಡವನ್ನು ಚೆನ್ನಾಗಿ ಕಲಿತಿದ್ದಾರೆ. ಅಲ್ಲಿ ಅವರು ಜನಪ್ರಿಯ ವ್ಯಕ್ತಿಯಾಗಿದ್ದಾರೆ.

ಯಾತ್ರೆ ಕ್ಯಾತನಹಳ್ಳಿ ತಲುಪಿತು. ಈ ಗ್ರಾಮ ಪಾಂಡವಪುರ ತಾಲ್ಲೂಕಿನ ಒಂದು ಮುಖ್ಯ ಗ್ರಾಮ. ರೈತ ಸಂಘದ ಮುಖಂಡರಾದ ಶ್ರೀ ಕೆ.ಪುಟ್ಟಣ್ಣಯ್ಯನವರು ಇದೇ ಗ್ರಾಮದವರು. ಈ ಗ್ರಾಮದಲ್ಲಿ ವೀರೇಶ ಬಾನುಲಿ ಸ್ವಾಮಿ ವಿವೇಕಾನಂದ ಕೇಂದ್ರವಿದೆ. ಈ ಕೇಂದ್ರ ಬಹು ದೊಡ್ಡದಾಗಿ ಬೆಳೆದಿದೆ. ಅನೇಕ ಆಧ್ಯಾತ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುತ್ತಿರುತ್ತದೆ. ಈ ಕೇಂದ್ರದ ಮುಖ್ಯ ಸಂಚಾಲಕರಾಗಿ ಜೆ.ಕೃಷ್ಣಕುಮಾರ್ ಕೆಲಸ ಮಾಡುತ್ತಿದ್ದಾರೆ. ಈ ಕೇಂದ್ರದ ಕಾರ್ಯಕರ್ತರು ಯಾತ್ರೆಗೆ ತುಂಬ ನೆರವಾದರು. ತಮ್ಮ ಕೇಂದ್ರದಲ್ಲಿ ಸಭೆಯನ್ನು ಏರ್ಪಡಿಸಿಕೊಟ್ಟರು. ಈ ಸಂದರ್ಭದಲ್ಲಿ ಕೃಷ್ಣಕುಮಾರರ ಸಹೋದರ ಶ್ರೀ ಶ್ರೀನಿವಾಸ್‌ರವರ ಪರಿಚಯವಾಯಿತು. ಮುಂದೆ ಕಾಲಕ್ರಮೇಣ ಶ್ರೀನಿವಾಸ್‌ರವರು ಜನಪದ ಸೇವಾ ಟ್ರಸ್ಟಿಗೆ ತುಂಬ ಹತ್ತಿರಾದರು. ಇವರು ಯೋಗಾ ಪಟುಗಳು, ಕರ್ನಾಟಕ ಸಂಗೀತ ವಿದ್ಯಾರ್ಥಿ. ಭಾವಗೀತೆ ಹೇಳುತ್ತಾರೆ. ಸಂಘಟನಾ ಚತುರರು. ಈಗ ಇವರು ಟ್ರಸ್ಟಿನ ಆಹ್ವಾನಿತ ಸದಸ್ಯರಾಗಿದ್ದಾರೆ. ಕ್ಯಾತನಹಳ್ಳಿ ಪ್ರದೇಶದಲ್ಲಿ ಯಾತ್ರೆ ನಡೆಯುತ್ತಿದ್ದಾಗ ತುಂಬ ಸಹಾಯ ಮಾಡಿದ ವ್ಯಕ್ತಿ ಆ ಗ್ರಾಮದ ಡಾ.ಶ್ರೀನಿವಾಸ್‌ರವರು.

ಯಾತ್ರೆ ಮುಗಿದ ನಂತರ ಯಾತ್ರೆಯ ಅನುಭವವನ್ನು ತಿಳಿಸಲು ಸಾಧ್ಯವಾಗುವಂತೆ ಒಂದು ಸಭೆಯನ್ನು ಮೇಲುಕೋಟೆಯಲ್ಲಿ ಏರ್ಪಡಿಸಲಾಗಿತ್ತು. ಗ್ರಾಮ ಸ್ವರಾಜ್ಯ ಯಾತ್ರೆ ಒಂದು ಅಭೂತಪೂರ್ವ ಅನುಭವ.

* * *

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ
ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ಶ್ರೀ ಆನಂದರಾವ್ ಬಾಟ್ನಿ – ಮೈಸೂರು
ಈ ಬಂಧುಗಳು ತಮ್ಮ ಚಂದಾ ನವೀಕರಿಸಿದ್ದಾಕ್ಕಾಗಿ ಹಾಗೂ
ಹೊಸದಾಗಿ ಪತ್ರಿಕೆಗೆ ಚಂದಾದಾರರಾದ,
ಶ್ರೀ ಸಿ.ವಿ.ತಿರುಮಲರಾವ್ – ಬೆಂಗಳೂರು
ಶ್ರೀಮತಿ ಎಂ.ಬಿ.ಬಾಲಾಂಬ ಶಿವರಾಮ್ – ಮೈಸೂರು
ಶ್ರೀಮತಿ ಎನ್.ಶಕುಂತಲಾ ವೇಣುಗೋಪಾಲ್ – ಮೈಸೂರು
ಶ್ರೀ ಹೆಚ್.ವೀರೇಗೌಡ – ಮೈಸೂರು
ಇವರಿಗೆ ಕೃತಜ್ಞತೆಗಳು.

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸಧ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು ಮುಖ್ಯವಾಗಿ, ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜಹಿತ ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳ ಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ ೧೫ ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

–ಸಂಪಾದಕರು

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ
(–ಸಂಪಾದಕರು)

ತೆರೆದ-ಅಂಚೆ

KA / SK / MND / 470 / 2009-2011
Regd. no. KAR / KAN / 2000 / 3820

ಶ್ರೀಮತಿ/ ಶ್ರೀ..

....

....

JANAPADA VICHARA - Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya – 571431.DTP Sanketh, Melkote. Printed at Sanketh, Mudrana, Melkote. Phone : 08236 – 299998 e-mail : janapada@yahoo.com web : janapada.net